ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಮಾರ್ಚ್ 16, 2021

ಸಂಪುಟ : 47 ಸಂಚಿಕೆ : 316 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಮೀಸಲಾತಿ ಹೋರಾಟ ಕೈ ಬಿಟ್ಟ ಪಂಚಮಸಾಲಿ ಶ್ರೀ

ಬೆಂಗಳೂರು, ಮಾ. 15 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿಂದು ನೀಡಿದ ಭರವಸೆ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಕ್ಕೆ ತಮ್ಮನ್ನು ಸೇರಿಸಬೇಕೆಂಬ ಹೋರಾಟವನ್ನು ಪಂಚಮಸಾಲಿ ಸಮುದಾಯ ಕೈಬಿಟ್ಟಿದೆ.



ಯಡಿಯೂರಪ್ಪ ನೀಡಿದ ಭರವಸೆ ಹಿನ್ನೆಲೆ: ಧರಣಿ ಅಂತ್ಯಗೊಳಿಸಿದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ

ತಮ್ಮ ಸಮುದಾಯಕ್ಕೆ ಮೀಸಲಾತಿ ಕಲ್ಪಿಸಲು ಕಳೆದ ಕೆಲವು ದಿನಗಳಿಂದ ಹೋರಾಟ ನಡೆಸುತ್ತಿದ್ದ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ಬಸವ ಮೃತ್ಯುಂಜಯ ಸ್ವಾಮೀಜಿ ಅವರು, ಮುಖ್ಯಮಂತ್ರಿ ಅವರ ಭರವಸೆ ಹಿನ್ನೆಲೆಯಲ್ಲಿ ತಮ್ಮ ಧರಣಿ ನಿಲ್ಲಿಸಿದರು.

ಸಮುದಾಯದ ಜನಪ್ರತಿನಿಧಿಗಳು ನಗರದ ಸ್ವಾತಂತ್ರ್ಯ ಸಂಗ್ರಾಮ ಉದ್ಯಾನವನದಲ್ಲಿ ಧರಣಿ ನಡೆಸುತ್ತಿದ್ದ ಸ್ವಾಮೀಜಿ ಅವರನ್ನು ಭೇಟಿ ಮಾಡಿ, ಸರ್ಕಾರದ ನಿಲುವು ತಿಳಿಸಿ, ಧರಣಿ ನಿಲ್ಲಿಸುವಂತೆ ಮನವಿ ಮಾಡಿದರು.

ಸರ್ಕಾರದ ಭರವಸೆಗೆ ಸ್ಪಂದಿಸಿದ ಸ್ವಾಮೀಜಿ ಶೇಂಗಾ ಒಬ್ಬಟ್ಟು ಸವಿದು ಷರತ್ತಿನ ಮೇಲೆ ಧರಣಿ ಸ್ಥಗಿತಗೊಳಿಸಿದರು.

ಇದಕ್ಕೂ ಮುನ್ನ ವಿಧಾನಸಭಾ ಅಧಿವೇಶನ ಆರಂಭವಾಗುತ್ತಿದ್ದಂತೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಪಂಚಮಸಾಲಿ ಸಮುದಾಯವನ್ನು 2ಎ ಪ್ರವರ್ಗಕ್ಕೆ ಸೇರಿಸುವ ಭರವಸೆಯನ್ನು ಸರ್ಕಾರ ನೀಡಬೇಕು ಹಾಗೂ ಎಷ್ಟು ದಿನಗಳಲ್ಲಿ ಸೇರಿಸುತ್ತೀರಿ ಎಂಬುದನ್ನು ತಿಳಿಸಬೇಕು ಎಂದು ಪಟ್ಟುಹಿಡಿದರು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಬಸವರಾಜ (2ನೇ ಪುಟಕ್ಕೆ)

# ಹೆಚ್ಚು ಜನ ಸೇರಿದರೆ ಕ್ರಮ : ಡಿಸಿ

## ಕೊರೊನಾ ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಪರಿಣಾಮಕಾರಿ ತಂತ್ರ

ದಾವಣಗೆರೆ, ಮಾ.15- ಕೊರೊನಾ ನಿಯಂತ್ರಣ ಹಿನ್ನೆಲೆಯಲ್ಲಿ ಮದುವೆ, ಜಾತ್ರೆ, ಧಾರ್ಮಿಕ ಕಾರ್ಯಕ್ರಮ ಸೇರಿದಂತೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ಜನರು ಸೇರಿದಲ್ಲಿ ನಿಯಮಾನುಸಾರ ಎಫ್‌ಐಆರ್ ದಾಖಲಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಸೋಮವಾರ ಕೋವಿಡ್ ಲಸಿಕಾಕರಣ ಪ್ರಗತಿ ಮತ್ತು ಕೋವಿಡ್ ನಿಯಂತ್ರಣ ಕುರಿತು ಅಧಿಕಾರಿಗಳೊಂದಿಗೆ ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೊರೊನಾ ಯುದ್ಧ ಇನ್ನೂ ಮುಗಿದಿಲ್ಲ. ಜನರು ಮೈಮರೆತು ಮದುವೆ, ಜಾತ್ರೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಸೇರುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರ ಹೊಸ ಮಾರ್ಗಸೂಚಿ ಹೊರಡಿಸಿದ್ದು ಎಲ್ಲರೂ ಸಹಕರಿಸಬೇಕು ಎಂದರು.

ಜನರು ಕೊರೊನಾ ನಿಯಮಾವಳಿಗಳನ್ನು ಗಾಳಿಗೆ ತೂರಿ ಬದುಕುವ ರೀತಿ ನೋಡುತ್ತಿದ್ದರೆ ಎರಡನೇ ಅಲೆ ದೂರವಿಲ್ಲ ಎನ್ನಿಸುತ್ತಿದೆ. ಸರ್ಕಾರ ಕೂಡ ಈ ಹಿನ್ನೆಲೆಯಲ್ಲಿ ಮೊದಲಿನಂತೆ ಮದುವೆ, ಜಾತ್ರೆ, ಇತರೆ ಸಾರ್ವಜನಿಕರು ಸೇರುವ ಕಾರ್ಯಕ್ರಮಗಳಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಮತ್ತು ನಿಗದಿತ ಸಂಖ್ಯೆಗಿಂತ ಹೆಚ್ಚು ಜನರು ಸೇರಿದರೆ ಕ್ರಮ ವಹಿಸುವುದಕ್ಕೆ ಸೂಚನೆ ನೀಡಿದೆ. ಈ ಸುತ್ತೋಲೆಯನ್ನು ಸಂಬಂಧಿಸಿದವರಿಗೆ ನೀಡಿ ಜಾರಿ ಮಾಡಲಾಗುತ್ತಿದ್ದು, ನಿಯಮ ಮೀರಿದರೆ ಪೊಲೀಸ್ ಇಲಾಖೆಯವರು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಕೊರೊನಾ ನಿಯಂತ್ರಣಕ್ಕೆ ಜಿಲ್ಲೆಯಲ್ಲಿ ಮೊದಲನೆಯದಾಗಿ ಕೊರೊನಾ ಪರೀಕ್ಷೆ ಸಂಖ್ಯೆ ಮತ್ತು ಲಸಿಕಾಕರಣವನ್ನು ಹೆಚ್ಚಿಸಲು ಜನರಲ್ಲಿ ಅರಿವು ಮೂಡಿಸಲು ಐಇಸಿ ಸೇರಿದಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಗೆ ಪ್ರತಿದಿನ 2800 ಟೆಸ್ಟ್ ಗುರಿ ನೀಡಲಾಗಿದ್ದರೂ ಅಷ್ಟು ಪ್ರಗತಿ (2ನೇ ಪುಟಕ್ಕೆ)

**ಶೀತ, ಕೆಮ್ಮು, ಮೈ ಕೈ ನೋವಿನಂತಹ ಪ್ರಕರಣಗಳಿಗೂ ಕೋವಿಡ್ ಟೆಸ್ಟ್**

**ಚನ್ನಗಿರಿಯಲ್ಲಿ ಗ್ರಾಮ ವಾಸ್ತವ್ಯ**

‘ ಡಿಸಿ, ಸಿಇಓ ಮತ್ತು ಎಸ್‌ಪಿ ಸೇರಿದಂತೆ ಎಲ್ಲ ಅಧಿಕಾರಿಗಳ ಸಮ್ಮುಖದಲ್ಲಿ ಮಾ. 20 ರ ಶನಿವಾರ ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿಯಲ್ಲಿ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಡೆಸುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.

## ಹೊರ ಜಿಲ್ಲೆ, ವಿದೇಶದಿಂದ ಬಂದವರಿಗೆ ಕೋವಿಡ್ ಟೆಸ್ಟ್ ಕಡ್ಡಾಯ: ಬೀಳಗಿ

ದಾವಣಗೆರೆ, ಮಾ. 15- ಕೊರೊನಾ ಎರಡನೇ ಅಲೆಯು ಉಲ್ಬಣಗೊಳ್ಳುವ ಎಲ್ಲಾ ಸಾಧ್ಯತೆಗಳಿರುವುದರಿಂದ, ವಿದೇಶ, ಅಂತರ ರಾಜ್ಯ ಹಾಗೂ ರಾಜ್ಯದ ಗಡಿ ಭಾಗಗಳ ಜಿಲ್ಲೆಗಳಿಂದ ದಾವಣಗೆರೆ ಜಿಲ್ಲೆಗೆ ಬರುವ ವ್ಯಕ್ತಿಗಳು ಕಡ್ಡಾಯವಾಗಿ ಸ್ವಯಂ ಪ್ರೇರಣೆಯಿಂದ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸೂಚಿಸಿದ್ದಾರೆ.

ವಿದೇಶ, ಅಂತರ ರಾಜ್ಯ ಹಾಗೂ ರಾಜ್ಯದ ಗಡಿ ಭಾಗಗಳ ಜಿಲ್ಲೆಗಳಾದ ಬೆಂಗಳೂರು, ಬೆಳಗಾವಿ, ಉಡುಪಿ, ದಕ್ಷಿಣ ಕನ್ನಡ, ಕಾರವಾರ, ಮೈಸೂರು, ಬೀದರ್, ಕಲಬುರ್ಗಿ, ಕೊಡಗು ಜಿಲ್ಲೆಗಳಿಂದ ದಾವಣಗೆರೆ ಜಿಲ್ಲೆಗೆ ಬರುವ ವ್ಯಕ್ತಿಗಳು ಕಡ್ಡಾಯವಾಗಿ ಸ್ವಯಂ ಪ್ರೇರಣೆಯಿಂದ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕೋವಿಡ್ ಪರೀಕ್ಷೆಯನ್ನು ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ನಗರ ಆರೋಗ್ಯ ಕೇಂದ್ರಗಳು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಮಾಡಲಾಗುವುದು ಎಂದರು.

ಜಿಲ್ಲೆಯ ನಗರ ಮತ್ತು ಗ್ರಾಮಗಳ ನಿವಾಸಿಗಳು ಹೊರ ಜಿಲ್ಲೆಗಳಿಂದ ಆಗಮಿಸಿದ್ದಲ್ಲಿ ಅಂತಹವರ ಮಾಹಿತಿಯನ್ನು ಕೋವಿಡ್-19 ವಾರ್ ರೂಂ. ಸಂಖ್ಯೆ. 8951539500ಕ್ಕೆ ಮಾಹಿತಿ ನೀಡಲು ಮನವಿ ಮಾಡಿದರು.

ಕೋವಿಡ್ ನಿಯಂತ್ರಣಕ್ಕೆ ಅಗತ್ಯ ಕ್ರಮಗಳಾದ ಮಾಸ್ಕ್ (2ನೇ ಪುಟಕ್ಕೆ)

## ಅತಿಥಿ ಉಪನ್ಯಾಸಕರಿಗೆ 25 ಸಾವಿರ ರೂ. ವೇತನ

ಬೆಂಗಳೂರು, ಮಾ. 15 - ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರಿಗೆ ಕನಿಷ್ಠ 25 ಸಾವಿರ ರೂ. ವೇತನ ನಿಗದಿಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪಮುಖ್ಯಮಂತ್ರಿ ಡಾ.ಸಿ. ಎನ್.ಅಶ್ವತ್ಥನಾರಾಯಣ ಭರವಸೆ ನೀಡಿದ್ದಾರೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಕಚೇರಿಯಲ್ಲಿ ರಾಜ್ಯ ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಿತರಕ್ಷಣಾ ಸಮಿತಿ ಪದಾಧಿಕಾರಿಗಳ ಜೊತೆ ಮಾತುಕತೆ ನಡೆಸಿದ ನಂತರ ಈ ವಿಷಯ ತಿಳಿಸಿದ ಉಪಮುಖ್ಯಮಂತ್ರಿ, ಮಾನವೀಯತೆ (2ನೇ ಪುಟಕ್ಕೆ)

## ರಸ್ತೆ ಸಾಲ ತೀರಿಸಲು ಟೋಲ್ ಅಗತ್ಯ

ಬೆಂಗಳೂರು, ಮಾ. 15 - ರಸ್ತೆ ನಿರ್ಮಾಣಕ್ಕಾಗಿ ಮಾಡಿರುವ ಸಾಲ ತೀರಿಸಲು ಟೋಲ್ ವಸೂಲಿ ಅಗತ್ಯ ಎಂದಿರುವ ಲೋಕೋಪಯೋಗಿ ಖಾತೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಅವೈಜ್ಞಾನಿಕ ಟೋಲ್‌ಗಳನ್ನು ತೆರವುಗೊಳಿಸುವುದಾಗಿ ವಿಧಾನಸಭೆಯಲ್ಲಿಂದು ಭರವಸೆ ನೀಡಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಡಾ.ಜಿ. ಪರಮೇಶ್ವರ್ ಮತ್ತಿತರರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ವಿಶ್ವ ಬ್ಯಾಂಕ್ ಸೇರಿದಂತೆ ಅನೇಕ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ರಾಜ್ಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ ಎಂದರು.

**ಮರು ಸಮೀಕ್ಷೆ ನಡೆಸಿ 60 ಕಿ.ಮೀ. ಒಂದರಂತೆ ಟೋಲ್ ಇರುವಂತೆ ಕ್ರಮಕ್ಕೆ ಕಾರಜೋಳ ಭರವಸೆ**

ಸಾಲ ಪಡೆಯುವ ಸಂದರ್ಭದಲ್ಲಿ ಮಾಡಿಕೊಂಡಿರುವ ಒಪ್ಪಂದ ಮತ್ತು ಸಾಲ ನೀಡಿದ ಸಂಸ್ಥೆಗಳಿಗೆ ಮರುಪಾವತಿ ಮಾಡಲು ಟೋಲ್ ವಸೂಲಿ ಅನಿವಾರ್ಯ, ಇದನ್ನು ಹಿಂದಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದ್ದಾರೆ.

ಉತ್ತಮ ರಸ್ತೆಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಇಡೀ ರಾಷ್ಟ್ರದಲ್ಲಿ (2ನೇ ಪುಟಕ್ಕೆ)

## ಸುಪ್ರೀಂನಲ್ಲಿ ಮೀಸಲಾತಿ ಮಿತಿ ಹೆಚ್ಚಿಸುವ ವಿಚಾರಣೆ ಆರಂಭ

ನವದೆಹಲಿ, ಮಾ. 15 –ಮೀಸಲಾತಿ ಪ್ರಮಾಣ ಶೇ.50 ಮೀರಬಾರದು ಎಂದು ಇಂದ್ರಾ ಸಾಹ್ನೆ ಪ್ರಕರಣದಲ್ಲಿ 1992ರಲ್ಲಿ ನೀಡಲಾದ ತೀರ್ಪನ್ನು ಮರು ಪರಿಶೀಲಿಸಬೇಕೆಂದು ದಾಖಲಾಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆರಂಭಿಸಿದೆ.

ಈ ಬಗ್ಗೆ ಎಲ್ಲಾ ರಾಜ್ಯಗಳು ವಾರದಲ್ಲಿ ತಮ್ಮ ನಿಲುವು ತಿಳಿಸಬೇಕೆಂದು ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಐವರು ಸದಸ್ಯರ ಸಂವಿಧಾನಿಕ ಪೀಠ ಹೆಚ್ಚುವರಿ ಗಡುವು ನೀಡಿದೆ. ಕೆಲ ರಾಜ್ಯಗಳು ಹೆಚ್ಚು ಸಮಯ ಕೇಳಿದ ಹಿನ್ನೆಲೆಯಲ್ಲಿ ಈ ಗಡುವು ನೀಡಲಾಗಿದೆ.

ಮೀಸಲಾತಿಗೆ ಇರುವ ಶೇ.50ರಷ್ಟು ಮಿತಿಯನ್ನು ತೆಗೆದು ಹಾಕಬೇಕು ಎಂದು ಅರ್ಜಿ ದಾಖಲಿಸಿರುವವರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಅರವಿಂದ ದಾತಾರ್, ಇಂದಿರಾ ಸಾಹ್ನೆ ತೀರ್ಪಿನ ಸಂಪೂರ್ಣ ಪರಾಮರ್ಶೆಯ ಅಗತ್ಯವಿಲ್ಲ. 1992ರ ತೀರ್ಪಿನ ಇತರ ಅಂಶಗಳನ್ನು ಪ್ರಶ್ನಿಸುತ್ತಿಲ್ಲ. ಶೇ.50ರ ಮಿತಿ ಬಗ್ಗೆ ಮಾತ್ರ ಪ್ರಶ್ನೆ ಇದೆ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ (2ನೇ ಪುಟಕ್ಕೆ)

## ಬ್ಯಾಂಕ್ ಮುಷ್ಕರದಿಂದ ವ್ಯವಹಾರಕ್ಕೆ ಅಡ್ಡಿ

ನವದೆಹಲಿ, ಮಾ. 15- ರಾಷ್ಟ್ರೀಕೃತ ಬ್ಯಾಂಕುಗಳ ಖಾಸಗೀ ಕರಣ ವಿರೋಧಿಸಿ ಬ್ಯಾಂಕ್ ಒಕ್ಕೂಟಗಳ ವೇದಿಕೆ ಕರೆ ನೀಡಿದ (2ನೇ ಪುಟಕ್ಕೆ)

**ಸಾಲ ಸೌಲಭ್ಯ**

ಮಾರ್ಕ್ಸ್ ಕಾರ್ಡ್, ಪ್ರಾಪರ್ಟಿ, ಪರ್ಸನೆಲ್ ಪ್ರಾಜೆಕ್ಟ್ ಮೇಲೆ ವಾರ್ಷಿಕ ಶೇ. 2ರ ಬಡ್ಡಿ ದರದಲ್ಲಿ ಸಬ್ಸಿಡಿ ಸಾಲವನ್ನು ಕೊಡಲಾಗುತ್ತದೆ. ಏಜೆಂಟರಿಗೆ ಅವಕಾಶವಿದೆ. ಆಸಕ್ತರು ಇದರ ಸದಾವಕಾಶವನ್ನು ಪಡೆದುಕೊಳ್ಳಲು ಕೂಡಲೇ ಸಂಪರ್ಕಿಸಿ

63604 56791



ಚಿತ್ರ: ಹೇಮಚಂದ್ರ ಜೈನ್

**ಓರಿ ಬೆದರಿಸುವ ಸ್ಪರ್ಧೆ**

ಹಾವೇರಿ ಜಿಲ್ಲೆಯ ಹಾನಗಲ್ಲು ಗ್ರಾಮದ ದೇವಿ ದೇವಸ್ಥಾನದ ಎದುರುಗಡೆ ಇರುವ ಹಳೆಕೋಟೆ ಬಯಲಿನಲ್ಲಿ ನಡೆದ ಹೋರಿ ಬೆದರಿಸುವ ಸ್ಪರ್ಧೆ ನೆರೆದಿದ್ದವರ ಮೈ ರೋಮಾಂಚನಗೊಳಿಸಿತು.

## ಪೆಟ್ರೋಲ್-ಡೀಸೆಲ್ ಜಿಎಸ್‌ಟಿ ವ್ಯಾಪ್ತಿಗೆ ತರುವ ಪ್ರಸ್ತಾವನೆ ಇಲ್ಲ

ನವದೆಹಲಿ, ಮಾ. 15 – ಪೆಟ್ರೋಲ್, ಡೀಸೆಲ್, ವೈಮಾನಿಕ ಇಂಧನ ಹಾಗೂ ನೈಸರ್ಗಿಕ ಅನಿಲಗಳ ಬೆಲೆಗಳು ದಾಖಲೆ ಮಟ್ಟ ತಲುಪುತ್ತಿದ್ದರೂ ಸಹ, ಅವುಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರುವ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.



ಜುಲೈ 1, 2017ರಂದು ಜಿ.ಎಸ್.ಟಿ. ಜಾರಿಗೆ ತರಲಾಗಿತ್ತು. ಆದರೆ, ಕಚ್ಚಾ ತೈಲ, ನೈಸರ್ಗಿಕ ಅನಿಲ, ಪೆಟ್ರೋಲ್, ಡೀಸೆಲ್ ಹಾಗೂ ವೈಮಾನಿಕ ಇಂಧನವನ್ನು ಜಿ.ಎಸ್.ಟಿ. ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಆದಾಯಕ್ಕಾಗಿ ಈ ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುತ್ತಿವೆ.

ಈ ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರ ಅಬಕಾರಿ ತೆರಿಗೆ ಹೇರುತ್ತಿದ್ದರೆ, ರಾಜ್ಯ ಸರ್ಕಾರ ವ್ಯಾಟ್ ಹೇರುತ್ತಿದೆ. ಈ ತೆರಿಗೆಯ ಪ್ರಮಾಣವನ್ನು ನಿಯಮಿತವಾಗಿ (2ನೇ ಪುಟಕ್ಕೆ)




SHREEDA SAREES EXHIBITION
Shiwcasing Bsnars, Kora, Jamdhanis, Organza with Zari, Kanchi Silks and Kalamkaris
HOTEL SOUTHERN STAR
Davangere Board Room 4th Floor
Date : 15 th & 16th March 2021 - Timing 11.00 am to 8.00 pm

# ಈಡೇರದ ಬೇಡಿಕೆ: ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

ದಾವಣಗೆರೆ, ಮಾ.15- ಪ್ರಸಕ್ತ ಬಜೆಟ್‌ನಲ್ಲಿ ತಮ್ಮ ಬೇಡಿಕೆಗಳ ಈಡೇರಿಸದಿರುವುದನ್ನು ಖಂಡಿಸಿ ನಗರದಲ್ಲಿಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಪ್ರತಿಭಟನಾ ಮೆರವಣಿಗೆ ಮುಖಾಂತರ ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ಆಗಮಿಸಿ, ಕೆಲ ಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ನಂತರ ಉಪವಿಭಾಗಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಿದರು.

ಸೇವಾ ಹಿರಿತನದ ಆಧಾರದಲ್ಲಿ ಗೌರವ ಧನ ಹೆಚ್ಚಳ ಮಾಡುವುದು, ಸುದೀರ್ಘ ಸೇವೆ ಸಲ್ಲಿಸಿದವರಿಗೆ ಗೋವಾ ರಾಜ್ಯದ ಮಾದರಿಯನ್ನು (ಮಾರ್ಪಾಟುಗಳೊಂದಿಗೆ) ಜಾರಿ ಮಾಡುವುದು, ತಪ್ಪಿದಲ್ಲಿ ಎಲ್ಲರಿಗೂ ಒಪ್ಪುವಂತಹ ಪ್ರತಿ ವರ್ಷ ಸೇವೆಗೆ ಇಂತಿಷ್ಟು ಮೊತ್ತವೆಂದು ನಿಗದಿಪಡಿಸಿದರೆ ಅವರವರ ಸೇವಾವಧಿಗನುಗುಣವಾಗಿ




ಸೌಲಭ್ಯ ಸಿಗಲಿದೆ. ಆದ್ದರಿಂದ ದೀರ್ಘ ಸೇವೆ ಸಲ್ಲಿಸಿದವರಿಗೆ ನ್ಯಾಯ ಸಿಗಲಿದೆ. 2015ರ ನಂತರ ನಿವೃತ್ತಿಯಾದ 7294 ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಇಡಿಗಂಟು ನೀಡುವುದು ಹಾಗೂ ನಿವೃತ್ತ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಕನಿಷ್ಠ 5 ಸಾವಿರ ಮಾಸಿಕ ಪಿಂಚಣಿ ಸೌಲಭ್ಯ ನೀಡಬೇಕು. ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸುವ ಇಎಸ್‌ಐ ಯೋಜನೆ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಅಂಗನವಾಡಿ ಕೇಂದ್ರಗಳಲ್ಲೇ ಎಲ್.ಕೆ.ಜಿ-ಯು.ಕೆ.ಜಿಯನ್ನು ಆರಂಭಿಸಿ ಕಾರ್ಯಕರ್ತೆಯರಿಗೆ ತರಬೇತಿ ನೀಡಬೇಕು, ಮಕ್ಕಳಿಗೆ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ ನೀಡಬೇಕು. ಮಿನಿ ಅಂಗನವಾಡಿ ಕೇಂದ್ರಗಳಿಗೆ ಸಹಾಯಕಿಯರನ್ನು ನೇಮಕ ಮಾಡುವವರೆಗೂ ಮಿನಿ ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ತಯಾರಿಸುವುದಿಲ್ಲ. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಗೌರವ ಧನದ ಅಂತರವನ್ನು ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು.

ಈ ಎಲ್ಲಾ ಬೇಡಿಕೆಗಳನ್ನು ಪರಿಗಣಿಸಲು ಇಲಾಖೆಯು ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಸರ್ಕಾರ ಯಾವುದೇ ಬೇಡಿಕೆಯನ್ನು ಬಜೆಟ್‌ನಲ್ಲಿ ಈಡೇರಿಸಿಲ್ಲ. ಆದ್ದರಿಂದ ಬೇಡಿಕೆಗಳನ್ನು ಈಡೇರಿಸುವವರೆಗೂ ಇ-ಸಮೀಕ್ಷಾ ಆಪ್‌ನಲ್ಲಿ ಪ್ರಥಮವಾಗಿ ಬಿಪಿಎಲ್ ಕಾರ್ಡ್ ಆಧರಿಸಿ ಸರ್ವೆ, ಬಿಎಲ್‌ಒ ಸರ್ವೆ, ಕೊರೊನಾ ಸರ್ವೆ, ಪೋಷಣ್ ಟ್ರ್ಯಾಕ್, ಆರೋಗ್ಯ ಇಲಾಖೆ ಸರ್ವೆ, ಮನೆ ಮನೆ ಸಮೀಕ್ಷೆ, ಭಾಗ್ಯಲಕ್ಷ್ಮಿ ಅರ್ಜಿ, ಮಾತೃವಂದನಾ ಅರ್ಜಿ, ಎಂಪಿಆರ್ ಇನ್ನಿತರೆ ಯಾವುದೇ ವರದಿಯನ್ನು ಅಂಗನವಾಡಿ ಇಲಾಖೆ ಸರ್ಕಾರಕ್ಕೆ ಬೇಡಿಕೆಗಳನ್ನು ಈಡೇರಿಸುವವರೆಗೂ ನೀಡುವುದಿಲ್ಲ ಎಂದು ಪ್ರತಿಭಟನಾಕಾರರು ಎಚ್ಚರಿಸಿದರಲ್ಲದೇ, ಸರ್ಕಾರವು ಈಗಲಾದರೂ ಬೇಡಿಕೆಗಳನ್ನು ಪ್ರಸಕ್ತ ಅಧಿವೇಶನದಲ್ಲಿ ಈಡೇರಿಸುವಂತೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಅಧ್ಯಕ್ಷ ಹೆಚ್.ಕೆ. ರಾಮಚಂದ್ರಪ್ಪ, ಆವರಗೆರೆ ಚಂದ್ರು, ಕಾರ್ಯದರ್ಶಿ ಎನ್. ಶಿವಣ್ಣ, ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ, ಎಂ.ಬಿ. ಶಾರದಮ್ಮ, ಎಸ್.ಎಸ್. ಮಲ್ಲಮ್ಮ, ವಿಶಾಲಾಕ್ಷಿ, ಕೆ. ಸುಧಾ ಸೇರಿದಂತೆ ಅನೇಕ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಭಾಗವಹಿಸಿದ್ದರು.

**ಎ.ಆರ್. ಇಂದ್ರರಾಜಪ್ಪ ನಿಧನ**



ದಾವಣಗೆರೆಯ ಹಿರಿಯ ವರ್ತಕರಾದ ಶ್ರೀ ಎ.ಆರ್. ಇಂದ್ರರಾಜಪ್ಪ ಅವರು ದಿನಾಂಕ 15.03.2021ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಮಣಿಪಾಲ ಆಸ್ಪತ್ರೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಶ್ರೀ ಎ.ಆರ್. ಉಜ್ಜನಪ್ಪ ಸೇರಿದಂತೆ ಮೂವರು ಸಹೋದರರನ್ನು ಅವರು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ಆಂಜನೇಯ ಬಡಾವಣೆಯ ಶ್ರೀ ಆಂಜನೇಯ ದೇವಸ್ಥಾನ ಹತ್ತಿರದಲ್ಲಿರುವ ಮೃತರ ಸ್ವಗೃಹದಲ್ಲಿ ದಿನಾಂಕ 16.03.2021ರ ಮಂಗಳವಾರ ಬೆಳಿಗ್ಗೆ 10 ಗಂಟೆಯವರೆಗೆ ಇಡಲಾಗುವುದು. ನಂತರ 11 ಕ್ಕೆ ಆಲೂರುಹಟ್ಟಿಯಲ್ಲಿರುವ ಅವರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ

## ಸಾಲ ತೀರಿಸಲು ಟೋಲ್ ಅಗತ್ಯ

**(1ನೇ ಪುಟದಿಂದ)** ಇಂತಹ ವ್ಯವಸ್ಥೆ ಜಾರಿಯಲ್ಲಿದೆ ಎಂದು ಸಮರ್ಥಿಸಿಕೊಂಡ ಉಪಮುಖ್ಯಮಂತ್ರಿ, ಕೆಲವೆಡೆ ಅವೈಜ್ಞಾನಿಕವಾಗಿ ಟೋಲ್ ನಿರ್ಮಾಣವಾಗಿರುವುದನ್ನು ನೀವುಗಳು ಗಮನಕ್ಕೆ ತಂದಿದ್ದೀರಿ. ಇಂತಹವುಗಳ ಬಗ್ಗೆ ಅಧಿಕಾರಿಗಳಿಂದ ಮತ್ತೊಮ್ಮೆ ಸಮೀಕ್ಷೆ ನಡೆಸಿ, ನಿಯಮದಂತೆ 60 ಕಿಲೋ ಮೀಟರ್‌ಗೆ ಒಂದು ಟೋಲ್ ಇರುವಂತೆ ಕ್ರಮ ಕೈಗೊಳ್ಳಲಾಗುವುದು ಎಂಬ ಭರವಸೆ ನೀಡಿದರು.

ಇದಕ್ಕೂ ಮುನ್ನ ಮಾತನಾಡಿದ ಡಾ. ಪರಮೇಶ್ವರ, ಕೊಳ್ಳೇಗಾಲ ಮತ್ತು ಕೊರಟಗೆರೆ ನಡುವೆ 200 ಕಿಲೋ ಮೀಟರ್ ಉದ್ದದ ರಾಜ್ಯ ಹೆದ್ದಾರಿಯಲ್ಲಿ ಅವೈಜ್ಞಾನಿಕವಾಗಿ ಟೋಲ್‌ಗಳನ್ನು ನಿರ್ಮಿಸಲಾಗಿದೆ, ಇದರಿಂದ ಸ್ಥಳೀಯರು ತಮ್ಮ ಸ್ಥಾನ ತಲುಪಲು ಎರಡು-ಮೂರು ಕಡೆ ಹಣ ಪಾವತಿಸಬೇಕಿದೆ ಎಂದರು.

ಪರಮೇಶ್ವರ್ ಮಾತಿಗೆ ಧ್ವನಿಗೂಡಿಸಿದ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಶಾಸಕರಾದ ಹಿಟ್ನಾಳ್, ಯು.ಟಿ.ಖಾದರ್, ವೆಂಕಟರಾವ್ ನಾಡಗೌಡ, ಕೆಲವು ಕಡೆ ಏಳು ಕಿಲೋ ಮೀಟರ್ ಅಂತರದಲ್ಲಿ ಎರಡು ಟೋಲ್ ಪ್ಲಾಜಾಗಳಿವೆ, ಕೆಲವು ಕಡೆ ಹನ್ನೊಂದು, ಇಪ್ಪತ್ಮೂರು ಕಿಲೋ ಮೀಟರ್‌ಗಳ ಅಂತರದಲ್ಲಿ ಎರಡು ಟೋಲ್ ಪ್ಲಾಜಾಗಳಿವೆ ಎಂದು ಸದನದ ಗಮನಕ್ಕೆ ತಂದರು.

## ಅತಿಥಿ ಉಪನ್ಯಾಸಕರಿಗೆ 25 ಸಾವಿರ

**(1ನೇ ಪುಟದಿಂದ)** ಆಧಾರದ ಮೇಲೆ ಈ ಬೇಡಿಕೆಗಳನ್ನು ಪರಿಶೀಲಿಸಲಾಗುವುದು ಎಂದರು. ಅತಿಥಿ ಉಪನ್ಯಾಸಕರ ಸೇವಾ ಸಕ್ರಮಾತಿ/ಸೇವಾ ಭದ್ರತೆಗೆ ಸಂಬಂಧಿಸಿದಂತೆ ಮಾನವೀಯ ನೆಲೆಯಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ಸಭಾಪತಿಗಳಾದ ಬಸವರಾಜ ಹೊರಟ್ಟಿ, ಶಿಕ್ಷಕರ ಕ್ಷೇತ್ರಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರೂ ಮನವಿ ಮಾಡಿದ್ದಾರೆ. ಹತ್ತು ವರ್ಷ ಸೇವಾವಧಿ ಪೂರೈಸಿರುವ ಉಪನ್ಯಾಸಕರ ಸೇವೆಯನ್ನು ಕಾಯಂ ಮಾಡಿ, ಪ್ರತಿ 12 ತಿಂಗಳಿಗೊಮ್ಮೆ ಮರುನೇಮಕ ಮಾಡಿಕೊಳ್ಳುವುದು ಬೇಡ, ಕಾಯಂ ಆಗುವವರೆಗೆ ಅವರ ಸೇವೆಯನ್ನು ನಿರಂತರವಾಗಿ ಬಳಸಿಕೊಳ್ಳುತ್ತಿರಬೇಕು ಎಂದು ಸದಸ್ಯರು ಆಗ್ರಹಿಸಿದರು.

ಗೌರವ ಧನ ಮೊತ್ತವನ್ನು ಮಾಸಿಕ ಕನಿಷ್ಠ 25,000 ರೂ.ಗಳನ್ನಾದರೂ ನಿಗದಿ ಮಾಡಬೇಕು ಎಂಬ ಬೇಡಿಕೆಗಳಿವೆ. ಇವೆಲ್ಲವನ್ನು ಪರಿಶೀಲಿಸಲಾಗುವುದು ಎಂದು ಡಾ.ಅಶ್ವತ್ಥನಾರಾಯಣ ಮಾಹಿತಿ ನೀಡಿದರು.

ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಆಯನೂರು ಮಂಜುನಾಥ್, ಅರುಣ್ ಶಹಾಪೂರ್, ಎಸ್.ಎಲ್. ಭೋಜೇಗೌಡ, ಎಸ್.ವಿ.ಸಂಕನೂರು, ಸುಶಿಲ್ ನಮೋಶಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಜಿಎಸ್‌ಟಿ ವ್ಯಾಪ್ತಿಗೆ ತರುವ ಪ್ರಸ್ತಾವನೆ ಇಲ್ಲ

**(1ನೇ ಪುಟದಿಂದ)** ಏರಿಸುತ್ತಲೇ ಬರಲಾಗುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆ ಯಾದರೂ ತೆರಿಗೆ ಇಳಿಸಿಲ್ಲ. ಇದರಿಂದಾಗಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಸಾರ್ವಕಾಲಿಕ ಹೆಚ್ಚಿನ ಮಟ್ಟಕ್ಕೆ ತಲುಪಿವೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ನಿರ್ಮಲಾ ಸೀತಾರಾಮನ್, ಈ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರುವ ಪ್ರಸ್ತಾಪ ಇಲ್ಲ ಎಂದಿದ್ದಾರೆ. ಯಾವ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಬೇಕು ಎನ್ನುವುದನ್ನು ಜಿಎಸ್.ಟಿ. ಮಂಡಳಿ ನಿರ್ಧರಿಸುತ್ತದೆ. ಈ ಮಂಡಳಿಯಲ್ಲಿ ರಾಜ್ಯಗಳೂ ಸದಸ್ಯವಾಗಿವೆ. ಇದುವರೆಗೂ ಜಿ.ಎಸ್.ಟಿ. ಹೇರುವ ಪ್ರಸ್ತಾಪ ಬಂದಿಲ್ಲ ಎಂದವರು ಹೇಳಿದ್ದಾರೆ. ಅಂತಹ ಪ್ರಸ್ತಾವನೆ ಬಂದರೆ ಆದಾಯದ ಮೇಲೆ ಆಗುವ ಪರಿಣಾಮ ಸೇರಿದಂತೆ ಎಲ್ಲ ಪ್ರಸ್ತುತ ವಿಷಯಗಳನ್ನು ಪರಿಗಣಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸೀತಾರಾಮನ್ ಹೇಳಿದ್ದಾರೆ.

ಪ್ರತ್ಯೇಕ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಹಣಕಾಸು ಖಾತೆ ಅಧೀನ ಸಚಿವ ಅನುರಾಗ್ ಸಿಂಗ್ ಠಾಕೂರ್, ವರ್ಷದ ಹಿಂದೆ ಪೆಟ್ರೋಲ್ ಮೇಲೆ 19.98 ರೂ.ಗಳ ಅಬಕಾರಿ ತೆರಿಗೆ ಇದ್ದದ್ದು ಈಗ 32.9 ರೂ.ಗಳಿಗೆ ತಲುಪಿದೆ. ಅದೇ ರೀತಿ ಡೀಸೆಲ್ ಮೇಲಿನ ಅಬಕಾರಿ ತೆರಿಗೆ 15.83 ರೂ. ಇದ್ದದ್ದು, ಈಗ 31.8 ರೂ.ಗಳಿಗೆ ತಲುಪಿದೆ ಎಂದಿದ್ದಾರೆ.

## ಕೋವಿಡ್ ಟೆಸ್ಟ್ ಕಡ್ಡಾಯ: ಬೀಳಗಿ

**(1ನೇ ಪುಟದಿಂದ)** ಧರಿಸುವುದು, ದೈಹಿಕ ಅಂತರ ಪಾಲನೆಯನ್ನು ಕಡ್ಡಾಯಗೊಳಿಸಲಾಗಿದ್ದು ಇದನ್ನು ಉಲ್ಲಂಘಿಸಿದಲ್ಲಿ ನಿಯಮಾನುಸಾರ ದಂಡ ವಿಧಿಸಲಾಗುವುದು. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಕಡ್ಡಾಯವಾಗಿದ್ದು, ತಪ್ಪಿದಲ್ಲಿ ಅಂತಹವರ ಮೇಲೆ ಎಫ್.ಐ.ಆರ್ ದಾಖಲಿಸಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಷ್ಕರದಿಂದ ವ್ಯವಹಾರಕ್ಕೆ ಅಡ್ಡಿ

**(1ನೇ ಪುಟದಿಂದ)** ಎರಡು ದಿನಗಳ ಬಂದ್ ಕಾರಣದಿಂದಾಗಿ, ಸೋಮವಾರ ಬ್ಯಾಂಕಿಂಗ್ ವ್ಯವಹಾರಕ್ಕೆ ಅಡ್ಡಿಯಾಗಿತ್ತು.

ಎರಡು ದಿನಗಳ ಕಾಲ ಕರೆ ನೀಡಲಾಗಿರುವ ಮುಷ್ಕರದ ಮೊದಲ ದಿನ ಹತ್ತು ಲಕ್ಷ ನೌಕರರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ ಎಂದು ಒಕ್ಕೂಟ ತಿಳಿಸಿದೆ. ಒಂಭತ್ತು ಬ್ಯಾಂಕ್ ಉದ್ಯೋಗಿಗಳ ಸಂಘಟನೆಗಳು ಬಂದ್‌ಗೆ ಬೆಂಬಲ ನೀಡಿವೆ. ಆದರೆ, ಖಾಸಗಿ ಬ್ಯಾಂಕುಗಳಾದ ಐ.ಸಿ.ಐ.ಸಿ.ಐ., ಹೆಚ್.ಡಿ.ಎಫ್.ಸಿ. ಹಾಗೂ ಆಕ್ಸಿಸ್ ಮತ್ತಿತರೆ ಬ್ಯಾಂಕುಗಳು ಮುಷ್ಕರದಲ್ಲಿ ಭಾಗಿಯಾಗಿರಲಿಲ್ಲ.

ಸರ್ಕಾರದ ಬಂಡವಾಳ ಹಿಂತೆಗೆತ ಯೋಜನೆಯ ಅನ್ವಯ, ಎರಡು ಸರ್ಕಾರಿ ವಲಯದ ಬ್ಯಾಂಕುಗಳನ್ನು ಖಾಸಗೀಕರಣ ಮಾಡಲಾಗುವುದು ಎಂದು ಬಜೆಟ್ ಮಂಡಿಸುವಾಗ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು.


|| ಶ್ರೀ ಶಿವ ನಾರದಮುನಿ ಪ್ರಸನ್ನ || || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾ|| & ಜಿ|| ಶಾಮನೂರು ಗ್ರಾಮದ ವಾಸಿ
ದಿ|| ಕೊಂಡಜ್ಜಿ ರುದ್ರಪ್ಪನವರ ಮಗನಾದ ಶ್ರೀ ಕೆ.ಆರ್. ಶಿವಕುಮಾರ್
ಇವರು ಮಾಡುವ ವಿಜ್ಞಾಪನೆಗಳು.
ಶರಣ ಬಂಧುಗಳೇ, ದಿನಾಂಕ 08.03.2021 ನೇ ಸೋಮವಾರ ಬೆಳಗಿನ ಜಾವ 4.30ಕ್ಕೆ ನನ್ನ ಪೂಜ್ಯ ತಾಯಿಯವರಾದ
**ಶ್ರೀಮತಿ ರತ್ನಮ್ಮನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 16.03.2021ನೇ ಮಂಗಳವಾರ ಬೆಳಿಗ್ಗೆ 10.30 ಘಂಟೆಗೆ
ಮೃತರ ಸ್ವಗೃಹ ಆಂಜನೇಯ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು
ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರ ಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಮೃತರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಕೊಂಡಜ್ಜಿ ವಂಶಸ್ಥರು, ಶಾಮನೂರು ಶ್ರೀಮತಿ ಶ್ರೀ ಗೌಡ್ರು ರುದ್ರಪ್ಪ ಮತ್ತು ವಂಶಸ್ಥರು, ಹಳೇ ಕುಂದವಾಡ ಹಾಗೂ ಬಂಧು-ಮಿತ್ರರು.



|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ**



ದಾವಣಗೆರೆ ಸಿದ್ದವೀರಪ್ಪ ಬಡಾವಣೆ ವಾಸಿ
**ಶ್ರೀಮತಿ ಪಾರ್ವತಮ್ಮ**
**ದಿ|| ಶ್ರೀ ಗುರುಸಿದ್ದಪ್ಪ ನಾಗಠಾಣ**
**ಮತ್ತು ಮಕ್ಕಳು**
ಮಾಡುವ ವಿಜ್ಞಾಪನೆಗಳು.
ದಿನಾಂಕ : 12..03.2021ನೇ
ಶುಕ್ರವಾರ ಬೆಳಿಗ್ಗೆ 4.15ಕ್ಕೆ
ನಮ್ಮ ಮಗನಾದ
**ಶ್ರೀ ನಾಗರಾಜ ನಾಗಠಾಣ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
**ದಿನಾಂಕ : 16.03.2021ನೇ ಮಂಗಳವಾರ ಮಧ್ಯಾಹ್ನ 12.00ಕ್ಕೆ ದಾವಣಗೆರೆ ನಗರದ ಸಿದ್ದವೀರಪ್ಪ ಬಡಾವಣೆ,** ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ, ಆದ ಕಾರಣ ತಾವುಗಳು ಆಗಮಿಸಬೇಕೆಂದು ಕೋರಿಕೊಳ್ಳುತ್ತೇವೆ.
ಇಂತಿ ದುಃಖತಪ್ತರು : **ಮೃತರ ತಾಯಿ ಪಾರ್ವತಮ್ಮ ನಾಗಠಾಣ ಮತ್ತು ಮಕ್ಕಳು, ಸೊಸೆಯಂದಿರು, ಮೃತರ ಪತ್ನಿ ಕವಿತ ನಾಗಠಾಣ ಮತ್ತು ಮಗ ಹಾಗೂ ಬಂಧು-ಮಿತ್ರರು, ದಾವಣಗೆರೆ.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ಮಾಸ್ಕ್, ಟೆಸ್ಟ್ ಜೊತೆಗೆ ಆಸ್ಪತ್ರೆಗಳು ಸಜ್ಜು

## ಎರಡನೇ ಕೊರೊನಾ ಅಲೆ ಎದುರಿಸುವ ಕ್ರಮಗಳ ಬಗ್ಗೆ ಸಿಎಂ ಸಭೆಯಲ್ಲಿ ನಿರ್ಧಾರ

ಬೆಂಗಳೂರು, ಮಾ. 15 - ಮಾಸ್ಕ್ ಮತ್ತು ಸಾಮಾಜಿಕ ಅಂತರ ಕಡ್ಡಾಯ, ಪರೀಕ್ಷೆ ಹೆಚ್ಚಳ, ಲಸಿಕೆ ಚುರುಕುಗೊಳಿಸುವುದೂ ಸೇರಿದಂತೆ ಹಲವಾರು ಕ್ರಮಗಳ ಮೂಲಕ ಕೊರೊನಾ ನಿಯಂತ್ರಣಕ್ಕೆ ತರಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹಿರಿಯ ಅಧಿಕಾರಿಗಳು ಹಾಗೂ ತಜ್ಞರ ಜೊತೆ ನಡೆಸಿದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಕೊರೊನಾ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ಸಭೆ ನಡೆಸಲಾಗಿತ್ತು. ಸಭೆಯಲ್ಲಿ ತಾಂತ್ರಿಕ ಸಲಹಾ ಸಮಿತಿ ಹಲವಾರು ಸಲಹೆಗಳನ್ನು ನೀಡಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಬೀದರ್, ಕಲಬುರಗಿ, ಬೆಂಗಳೂರು ಗ್ರಾಮಾಂತರ, ಉಡುಪಿ, ತುಮಕೂರು, ದಕ್ಷಿಣ ಕನ್ನಡ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಪಾಸಿಟಿವಿಟಿ ರೇಟ್ ಹೆಚ್ಚಾಗಿದೆ.ಇದು ಕೊರೊನಾ ಎರಡನೇ ಅಲೆಯ ಮುನ್ಸೂಚನೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಭೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಮಾಸ್ಕ್ ಧಾರಣೆ , ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು. ಉಲ್ಲಂಘನೆಗೆ ಕಟ್ಟುನಿಟ್ಟಾಗಿ ದಂಡ ವಿಧಿಸಬೇಕು, ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುವವರ ಸಂಖ್ಯೆಯನ್ನು ಮಾರ್ಗಸೂಚಿಯಂತೆ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು ಎಂದು ತೀರ್ಮಾನಿಸಲಾಗಿದೆ.


ರೋಗ ಲಕ್ಷಣ ಇರುವವರು, ಅಂಗಡಿ ಮಾಲೀಕರು, ಬಸ್ ನಿರ್ವಾಹಕರು ಮತ್ತಿತರರಿಗೆ ಪರೀಕ್ಷೆ ನಡೆಸಬೇಕು, ಸಂಪರ್ಕಿತರ ಪತ್ತೆ ಕಾರ್ಯ ಚುರುಕುಗೊಳಿಸಬೇಕು. ಇದರ ಜೊತೆಗೆ, ಕೊರೊನಾ ಆಸ್ಪತ್ರೆಗಳು, ಆಕ್ಸಿಜನ್ ಪೂರೈಕೆ ಇರುವ ಹಾಸಿಗೆಗಳು, ಐಸಿಯು ಲಭ್ಯತೆ ಹಾಗೂ ಕೋವಿಡ್ ಕೇರ್ ಸೆಂಟರುಗಳ ಸ್ಥಾಪನೆಗೆ ಸಿದ್ಧತೆ ಮಾಡಿಕೊಳ್ಳಬೇಕು, ಖಾಸಗಿ ಆಸ್ಪತ್ರೆಗಳೊಂದಿಗೆ ಮಾತುಕತೆ ನಡೆಸಿ, ಹಿಂದಿನಂತೆ ಕೋವಿಡ್ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯ ಒದಗಿಸಬೇಕು ಎಂದು ನಿರ್ಧರಿಸಲಾಗಿದೆ. ಹಿರಿಯ ನಾಗರಿಕರಿಗೆ ಲಸಿಕೆ ಹಾಕುವ ಕಾರ್ಯವನ್ನು ಚುರುಕುಗೊಳಿಸಿ, ಗ್ರಾಮೀಣ ಪ್ರದೇಶ ಹಾಗೂ ಕೊಳೆಗೇರಿಗಳಲ್ಲಿ ಲಸಿಕೆ ಪ್ರಮಾಣ ಹೆಚ್ಚಿಸಬೇಕು. ಎಲ್ಲ ಇಲಾಖೆಗಳು ಸ್ವಯಂ ಸೇವಾ ಸಂಸ್ಥೆಗಳ ಸಹಕಾರದೊಂದಿಗೆ ಈ ದಿಸೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ನಿಗದಿತ ಸಂಖ್ಯೆ ಮೀರಿ ಪ್ರಯಾಣಿಕರನ್ನು ಕರೆದೊಯ್ಯದಿರಲು ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ಜನರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕು ಎಂಬ ತೀರ್ಮಾನ ತೆಗೆದುಕೊಳ್ಳಲಾಗಿದೆ.

ತಾಂತ್ರಿಕ ಸಲಹಾ ಸಮಿತಿಯ ಸದಸ್ಯರಾದ ಡಾ. ಸಿ.ಎನ್. ಮಂಜುನಾಥ್, ಡಾ. ಸುದರ್ಶನ್, ಡಾ. ರವಿ, ಪ್ರೊ. ಗಿರಿಧರಬಾಬು, ವಿಶ್ವ ಆರೋಗ್ಯ ಸಂಸ್ಥೆಯ ಪ್ರತಿನಿಧಿ ಮೊದಲಾದವರು ತಮ್ಮ ಅಭಿಪ್ರಾಯ ಮಂಡಿಸಿದರು.

ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮತ್ತಿತರೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಲಸಿಕಾ ಅಭಿಯಾನಕ್ಕೆ ಚುರುಕು



ಆರೋಗ್ಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಲಸಿಕೆ ಪಡೆದಿದ್ದಾರೆ. ಆದರೆ, ಇತರ ಮುಂಚೂಣಿಯ ಸಿಬ್ಬಂದಿಯಲ್ಲಿ ಶೇ. 58 ರಷ್ಟು ಮಾತ್ರ ಲಸಿಕೆ ಪಡೆದಿದ್ದಾರೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಳವಳ ವ್ಯಕ್ತವಾಗಿದ್ದು, ಲಸಿಕೆ ಅಭಿಯಾನ ಚುರುಕುಗೊಳಿಸಲು ತೀರ್ಮಾನಿಸಲಾಗಿದೆ.

ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಲಸಿಕೆ ಹಾಕಲು, ಮತದಾರರ ಪಟ್ಟಿಯನ್ನು ಆಧರಿಸಿ, ಹಿರಿಯ ನಾಗರಿಕರನ್ನು ಗುರುತಿಸಿ ಲಸಿಕೆ ಹಾಕಿಸಲು ನಿರ್ಧರಿಸಲಾಗಿದೆ. ಗ್ರಾ.ಪಂ.ಗಳು ತಮ್ಮ ವ್ಯಾಪ್ತಿಯ ಹಿರಿಯ ನಾಗರಿಕರಿಗೆ ಲಸಿಕೆ ಕೊಡಿಸಬೇಕೆಂದು ಸೂಚನೆ ನೀಡಲಾಗುವುದು.

# ಕಾಟಿಕ್ ಸಮಾಜವನ್ನು ಎಸ್ಸಿಗೆ ಸೇರಿಸಲು ಒತ್ತಾಯ




**ಹರಿಹರ**

ಹರಿಹರ, ಮಾ.15- ಸಮಾಜದ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರಾಗಿ ಬದುಕುತ್ತಿರುವ ಮತ್ತು ಪರಿಶಿಷ್ಟ ಜಾತಿ ಸೇರಿರದ ಕಾಟಿಕ್ ಉಪ ಜಾತಿಗಳಾದ ಕಟುಗ, ಕಲಾಲ್, ಸೂರ್ಯವಂಶ ಕ್ಷತ್ರಿಯ, ಹಿಂದೂ ಕಲಾಲ್, ಹಿಂದೂ ಕಾಟಿಕ್, ಶೇರೆ ಗಾರ, ಅರೇಕಸಾಯಿ, ಅರೇಖಾಟಿಕಲು, ಕಸಾಬು, ಕಸಾಯಿ, ಮರಟ್ಟಿ ಹೀಗೆ ಅನೇಕ ಹೆಸರುಗಳಿಂದ ಕರೆಸಿಕೊಳ್ಳುವ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯಿಸಿ ದಾವಣಗೆರೆ ಸಿಟಿ ಮತ್ತು ಹರಿಹರ ಟೌನ್ ಸಂಘದ ವತಿಯಿಂದ ತಹಸೀಲ್ದಾರ್‌ಗೆ ಮನವಿ ಅರ್ಪಿಸಲಾಯಿತು.

ಮನವಿ ಅರ್ಪಿಸಿ ಮಾತನಾಡಿದ ಮುಖಂಡರು, ಸಮಾಜದಲ್ಲಿ ಮದ್ಯ ಮತ್ತು ಮಾಂಸ ಮಾರಾಟ ಮಾಡಿ ಜೀವನ ನಡೆಸುತ್ತಿರುವ ನಮ್ಮ ಸಮಾಜದ ಜನರಿಗೆ ಆಧುನಿಕ ಸಮಾಜದಲ್ಲಿ ಯಾವುದೇ ರೀತಿಯ ಗೌರವ ಇಲ್ಲದಾಗಿದೆ. ಅಸ್ಪೃಶ್ಯರಂತೆ ನಮ್ಮನ್ನು ಕಾಣಲಾಗುತ್ತಿದೆ. ಇದನ್ನು ಮನಗಂಡು 2011 ರಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕುವೆಂಪು ವಿಶ್ವವಿದ್ಯಾಲಯದ ಪ್ರೊ. ಗುರುಲಿಂಗಯ್ಯನವರಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಗ್ರಾಮ, ಹೋಬಳಿ, ಪುರಸಭೆಗಳನ್ನು ಸಂಚಾರ ಮಾಡಿ ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿ 2012 ರಲ್ಲಿ ವರದಿ ಪಡೆಯಲಾಗಿದೆ. ಸಚಿವ ಸಂಪುಟದಲ್ಲಿ ವರದಿಯನ್ನು ಪುರಸ್ಕರಿಸಿ ಕೇಂದ್ರಕ್ಕೆ ರವಾನಿಸಲು ಸಮಾಜದ ವತಿಯಿಂದ ಒತ್ತಾಯ ಮಾಡುತ್ತಿದ್ದೇವೆ ಎಂದರು.

ವಕೀಲ ನಾಗರಾಜ್ ಹಲವಾಗಲು ಮಾತನಾಡಿ, ರಾಜ್ಯದಲ್ಲಿ ಕುಲಶಾಸ್ತ್ರೀಯ ಅಧ್ಯಯನ ನಡೆದಿದ್ದರೂ ಸಹ ರಾಜ್ಯ ಸರ್ಕಾರ ಹಿಂದೇಟು ಹಾಕುತ್ತಿದೆ. ಕೂಡಲೇ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಒತ್ತಾಯಿಸಿದರು.

ತಹಸೀಲ್ದಾರ್‌ರವರ ಅನುಪಸ್ಥಿತಿಯಲ್ಲಿ ತಹಸೀಲ್ದಾರ್ ಗ್ರೇಡ್-1 ಚನ್ನವೀರ ಸ್ವಾಮಿ ಮನವಿ ಸ್ವೀಕರಿಸಿದರು. ಈ ಸಮಯದಲ್ಲಿ ಸಂಘದ ಗೌರವ ಅಧ್ಯಕ್ಷ ರೇವಣಪ್ಪ ಖಿಜೂರ್‌ಕರ್, ಅಧ್ಯಕ್ಷ ಮಾಲತೇಶ್ ಕಲಾಲ್ ಪತ್ತೆಪುರಿ, ಪ್ರಧಾನ ಕಾರ್ಯದರ್ಶಿ ಏಕನಾಥ್ ತಿಲಕ್ ಬನೂಖಂಡೆ, ಹಿರಿಯ ವಕೀಲರಾದ ಶ್ರೀನಿವಾಸ್ ಕಲಾಲ್, ನಾಗರಾಜ್ ಹಲವಾಗಲ್, ಗಂಗಾರಾಮ್ ಕಲಾಲ್, ವಿರುಪಾಕ್ಷ ಕಲಾಲ್, ಸುನಿಲ್ ಕಲಾಲ್, ಮಲ್ಲಿಕಾರ್ಜುನ್ ಕಲಾಲ್, ಭಾಗೀರಥಿ ಕಲಾಲ್, ಅಕ್ಕಮಹಾದೇವಿ ಕಲಾಲ್, ರತ್ನಮ್ಮ ಕಲಾಲ್, ಗಾಯತ್ರಿ ಬಾಯಿ, ಡಾ. ಬಸವರಾಜ ಕಲಾಲ್, ರವೀಂದ್ರನಾಥ್ ಕಲಾಲ್, ಈಶ್ವರ್ ಕಲಾಲ್ ಮತ್ತಿತರರು ಹಾಜರಿದ್ದರು.

## ಹೆಚ್ಚು ಜನ ಸೇರಿದರೆ ಕ್ರಮ

**(1ನೇ ಪುಟದಿಂದ)** ಇಲ್ಲ. ಆದ್ದರಿಂದ ಇನ್ನು ಮುಂದೆ ನೀಡಿರುವ ಗುರಿ ಜೊತೆಗೆ 100 ಹೆಚ್ಚುವರಿ ಟೆಸ್ಟ್ ಮಾಡಬೇಕು. ದಾವಣಗೆರೆ ತಾಲ್ಲೂಕಿಗೆ 1000, ಹೊನ್ನಾಳಿ ಮತ್ತು ಹರಿಹರ ತಲಾ 375, ಜಗಳೂರು 300 ಮತ್ತು ಚನ್ನಗಿರಿ 450 ಟೆಸ್ಟ್ ಜೊತೆಗೆ ಹೆಚ್ಚುವರಿ 100 ಟೆಸ್ಟ್ ಮಾಡಬೇಕು. ಹಾಗೂ ಸೋಂಕಿತರ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರ ಟೆಸ್ಟ್ ಮಾಡಬೇಕು ಎಂದು ಸೂಚಿಸಿದರು. ಎಸ್‌ಪಿ ಹನುಮಂತರಾಯ ಮಾತನಾಡಿ, ತಹಶೀಲ್ದಾರರು ಜಾತ್ರೆ, ಧಾರ್ಮಿಕ ಕಾರ್ಯಕ್ರಮಗಳು, ಮದುವೆ ಇತರೆ ಜನ ಸೇರುವ ಸಮಾರಂಭಗಳಿಗೆ ಸ್ಥಳೀಯ ಸಂಸ್ಥೆಗಳು ಅನುಮತಿ ನೀಡುವಾಗ ಕಟ್ಟುನಿಟ್ಟಾಗಿ ನಿಯಮಾವಳಿಯನ್ನು ಪಾಲಿಸಬೇಕು. ಕೋವಿಡ್ ನಿಯಮಾವಳಿ ಪಾಲನೆ ಬಗ್ಗೆ ಸಭೆ ಕರೆದು ನಡಾವಳಿ ಸಿದ್ದಪಡಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ತಹಶೀಲ್ದಾರರಾದ ಗಿರೀಶ್, ಡಾ.ನಾಗವೇಣಿ, ರಾಮಚಂದ್ರಪ್ಪ, ಬಸವನಗೌಡ, ಆರ್‌ಸಿಹೆಚ್‌ಓ ಡಾ.ಮೀನಾಕ್ಷಿ, ಡಿಎಸ್‌ಓ ಡಾ.ರಾಘವನ್, ಟಿಹೆಚ್‌ಓ ಡಾ.ವೆಂಕಟೇಶ್ ಇತರರಿದ್ದರು.

## ಮೀಸಲಾತಿ ಹೋರಾಟ ಕೈ ಬಿಟ್ಟ ಶ್ರೀ

**(1ನೇ ಪುಟದಿಂದ)** ಬೊಮ್ಮಾಯಿ, ಸರ್ಕಾರದ ನಿಲುವನ್ನು ತಿಳಿಸಿದರಾದರೂ, ಇದಕ್ಕೆ ಯತ್ನಾಳ್ ತೃಪ್ತರಾಗಲಿಲ್ಲ.

ಸದನದಲ್ಲಿ ಹಾಜರಿದ್ದ ಮುಖ್ಯಮಂತ್ರಿ ಮಾತನಾಡಿ, ಹಿಂದುಳಿದ ವರ್ಗಗಳ ಆಯೋಗ ಹಾಗೂ ಮೀಸಲಾತಿ ಹಂಚಿಕೆಗಾಗಿ ನೇಮಕವಾಗಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ಸಮಿತಿಯ ವರದಿ ಬಂದ ತಕ್ಷಣ ಸಮಾಜಕ್ಕೆ ಸಲ್ಲಬೇಕಾದ ಮೀಸಲಾತಿಯನ್ನು ನೀಡುತ್ತೇನೆ ಎಂಬ ಭರವಸೆ ನೀಡಿದರು. ಯತ್ನಾಳ್ ಮತ್ತು ಇತರೆ ಶಾಸಕರು ಎಷ್ಟೇ ಒತ್ತಾಯ ಮಾಡಿದರೂ, ಇಂತಿಷ್ಟು ಸಮಯದಲ್ಲಿ ಮೀಸಲಾತಿ ಕಲ್ಪಿಸಲಾಗುವುದು ಎಂಬ ಭರವಸೆಯನ್ನು ಮಾತ್ರ ಮುಖ್ಯಮಂತ್ರಿ ನೀಡಲಿಲ್ಲ.

ಮುಖ್ಯಮಂತ್ರಿ ಅವರನ್ನು ಕಂಡರೆ ಸದಾ ಕೆಂಡ ಕಾರುತ್ತಿದ್ದ ಯತ್ನಾಳ್, ಮುಖ್ಯಮಂತ್ರಿ ಉತ್ತರಕ್ಕೆ ತೃಪ್ತಿ ಪಟ್ಟಿದ್ದಲ್ಲದೆ ಧನ್ಯವಾದ ತಿಳಿಸಿ, ನೀವು ನೀಡಿರುವ ಭರವಸೆ ಹಿನ್ನೆಲೆಯಲ್ಲಿ ಸ್ವಾಮೀಜಿಗಳನ್ನು ಭೇಟಿ ಮಾಡಿ, ಅವರ ಮನವೊಲಿಸಿ ಧರಣಿ ಕೈಬಿಡುವಂತೆ ಮನವಿ ಮಾಡಿಕೊಳ್ಳುತ್ತೇನೆ ಎಂದು ಹೇಳಿದರು.

ಮುಖ್ಯಮಂತ್ರಿಗಳ ಉತ್ತರದಿಂದ ಸಮಾಧಾನವಾಗಿದೆ, ಆರು ತಿಂಗಳಲ್ಲಿ ಈ ವಿವಾದ ಇತ್ಯರ್ಥವಾಗಲಿ, ಒಂದು ವೇಳೆ ಇತ್ಯರ್ಥವಾಗದಿದ್ದರೆ ಪುನಃ ಹೋರಾಟದ ದಾರಿ ಹಿಡಿಯಬೇಕಾಗುತ್ತದೆ ಎಂದರು.

## ಇಂದು ವಲಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ದಾವಣಗೆರೆ : ಸ.ಪ್ರ.ದ. ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ವಿವಿ ದೈಹಿಕ ಶಿಕ್ಷಣ ನಿರ್ದೇಶಕರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಅಂತರ ಕಾಲೇಜು, ವಲಯ ಮತ್ತು ಅಂತರ್ ವಲಯ ಮಟ್ಟದ ಪುರುಷರ ಮತ್ತು ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಉದ್ಘಾಟನಾ ಸಮಾರಂಭವು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಇಂದು ಬೆಳಿಗ್ಗೆ 10.30 ಕ್ಕೆ ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ಸಮಾರಂಭ ಉದ್ಘಾಟಿಸುವರು. ದಾವಿವಿಯ ದೈಹಿಕ ಶಿಕ್ಷಣ ವಿಭಾಗದ ಮುಖ್ಯಾಧಿಕಾರಿ ಡಾ.ಕೆ. ವೆಂಕಟೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಸಂಜೆ 4 ಗಂಟೆಗೆ ಪಂದ್ಯಾವಳಿಯ ಸಮಾರೋಪ ಜರುಗಲಿದ್ದು, ಪ್ರಾಂಶುಪಾಲ ತೂ.ಕ. ಶಂಕರಯ್ಯ ಅಧ್ಯಕ್ಷತೆ ವಹಿಸುವರು. ಖೋ-ಖೋ ತರಬೇತುದಾರ, ಏಕಲವ್ಯ ಪ್ರಶಸ್ತಿ ವಿಜೇತ ಜೆ.ರಾಮಲಿಂಗಪ್ಪ ಸಮಾರೋಪ ಭಾಷಣ ಮಾಡಲಿದ್ದು, ದೈಹಿಕ ಶಿಕ್ಷಣ ನಿವೃತ್ತ ನಿರ್ದೇಶಕ ಎಂ.ಕೆ.ದಾನಪ್ಪ, ಸಂಘದ ಕಾರ್ಯದರ್ಶಿ ಹೆಚ್. ತಿಪ್ಪೇಸ್ವಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಐಕ್ಯೂಎಸಿ ಸಂಚಾಲಕ ಪ್ರೊ. ಟಿ. ವೀರೇಶ್ ಉಪಸ್ಥಿತರಿರುವರು.

## ಮೀಸಲಾತಿ ಮಿತಿ ಹೆಚ್ಚಿಸುವ ವಿಚಾರಣೆ ಆರಂಭ

**(1ನೇ ಪುಟದಿಂದ)** ರೂಪುಗೊಂಡ ನಂತರ ಕೇವಲ ಐದು ಬಾರಿ 11 ಸದಸ್ಯರ ಪೀಠ ರೂಪುಗೊಂಡಿದೆ. ಹೀಗಾಗಿ ವಿಸ್ತೃತ ಪೀಠ ಬಹಳ ಪ್ರಾಮುಖ್ಯತೆ ಪಡೆದುಕೊಂಡಿದೆ. ಇಂದ್ರಾ ಸಾವ್ನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ 11 ಸದಸ್ಯರ ಪೀಠ ರೂಪಿಸಬೇಕಿಲ್ಲ ಎಂದವರು ಹೇಳಿದ್ದಾರೆ.

ಈ ಅರ್ಜಿಯ ವಿಚಾರಣೆ ನಡೆಸುತ್ತಿರುವ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರ ರಾವ್, ಎಸ್. ಅಬ್ದುಲ್ ನಜೀರ್, ಹೇಮಂತ್ ಗುಪ್ತ ಹಾಗೂ ಎಸ್. ರವೀಂದ್ರ ಭಟ್ ಅವರಿದ್ದಾರೆ.

ಕೇರಳ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಜೈದೀಪ್ ಗುಪ್ತ, ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಮುಂದೂಡಬೇಕೆಂದು ಕೇಳಿದರು.

ಈ ವಾದವನ್ನು ತಳ್ಳಿ ಹಾಕಿದ ನ್ಯಾಯಾಲಯ, ಚುನಾವಣೆ ಕಾರಣದಿಂದಾಗಿ ವಿಚಾರಣೆ ಮುಂದೂಡಲಾಗದು. ಪ್ರತಿಯೊಂದು ರಾಜ್ಯದ ಮೇಲೂ ಪರಿಣಾಮ ಬೀರುವ ಸಂವಿಧಾನದ 102ನೇ ತಿದ್ದುಪಡಿ ಕುರಿತ ವಿಷಯ ಇದಾಗಿದೆ ಎಂದು ತಿಳಿಸಿತು.

ತಮಿಳುನಾಡು ಪರವಾಗಿ ಹಾಜರಿದ್ದ ಹಿರಿಯ ವಕೀಲ ಶೇಖರ್ ನಫಡೆ, ರಾಜ್ಯದಲ್ಲಿ ಶೇ.50ರ ಮಿತಿಯನ್ನು ಮೀರಿ ಮೀಸಲಾತಿ ಕಲ್ಪಿಸಿರುವ ವಿಶೇಷ ಪರಿಸ್ಥಿತಿಯನ್ನು ಪರಿಗಣಿಸಬೇಕು ಎಂದರು.

1992ರ ನಂತರ ಮಾಡಲಾಗಿರುವ ಸಂವಿಧಾನಿಕ ತಿದ್ದುಪಡಿಗಳು ಹಾಗೂ ಬದಲಾದ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇಂದಿರಾ ಸಾವ್ನೆ ತೀರ್ಪನ್ನು ಮರು ಪರಿಶೀಲಿಸಬೇಕೇ ಎಂಬುದೂ ಸೇರಿದಂತೆ ಐದು ಪ್ರಶ್ನೆಗಳ ಕುರಿತು ಸಂವಿಧಾನಿಕ ಪೀಠ ವಿಚಾರಣೆ ನಡೆಸಲಿದೆ.

# ನಾಲ್ವರು ಕಳ್ಳರ ಬಂಧನ : 5 ಲಕ್ಷ ರೂ. ಮೌಲ್ಯದ ಅಡಿಕೆ ವಶ





ದಾವಣಗೆರೆ, ಮಾ.15- ಅಡಿಕೆ ಕಳ್ಳತನ ಮಾಡಿದ್ದ ನಾಲ್ವರನ್ನು ಬಂಧಿಸಿ, ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 50 ಕೆ.ಜಿ. ತೂಕವಿರುವ 4 ಅಡಿಕೆ ಚೀಲಗಳು, 62 ಕೆ.ಜಿ. ತೂಕವಿರುವ 15 ಅಡಿಕೆ ಚೀಲಗಳು ಸೇರಿ ಸುಮಾರು 5 ಲಕ್ಷ ರೂ. ಮೌಲ್ಯದ ಅಡಿಕೆ ಹಾಗೂ ಕೃತ್ಯಕ್ಕೆ ಬಳಸಿದ ಓಮ್ನಿ ವಾಹನವನ್ನು ಹೊನ್ನಾಳಿ ವೃತ್ತದ ನ್ಯಾಮತಿ ಠಾಣೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಶಿವಮೊಗ್ಗ ಜಿಲ್ಲೆ ಕುಂಸಿಯ ಮುದುವಾಲ ಗ್ರಾಮದ ಅಬ್ದುಲ್ ಮಜೀದ್ ಅಲಿಯಾಸ್ ಸದ್ದಾಂ, ಕಾನೂನು ಸಂಘರ್ಷಕ್ಕೊಳಗಾದ ಬಾಲಕ, ಶಿವಮೊಗ್ಗದ ಸಾಗರ ತಾಲ್ಲೂಕಿನ ಆನಂದಪುರದ ಮಹಮ್ಮದ್ ತೌಸೀಫ್, ಹೊಸನಗರ ತಾಲ್ಲೂಕು ರಿಪ್ಪನ್ ಪೇಟೆಯ ಕೇದಲಗುಂಡಿ ನಾಗಾರ್ಜುನ ಬಂಧಿತರು.


ಮಾ.9ರಂದು ನ್ಯಾಮತಿಯ ಮಾದಾಪುರ ಗ್ರಾಮದ ಬಸವಗೌಡ ಎಂಬುವರ ಗೋದಾಮಿನಲ್ಲಿ ಇಟ್ಟಿದ್ದ ಸುಮಾರು 65 ಅಡಿಕೆ ಚೀಲ ಪೈಕಿ 15 ಅಡಿಕೆ ಚೀಲಗಳನ್ನು ಕಳವು ಮಾಡಲಾಗಿತ್ತು. ಈ ಸಂಬಂಧ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಸ್ಪಿ ಹನುಮಂತರಾಯ, ಎಎಸ್ಪಿ ಎಂ. ರಾಜೀವ್ ಹಾಗೂ ಚನ್ನಗಿರಿ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ ಮಾರ್ಗದರ್ಶನದಲ್ಲಿ ಹೊನ್ನಾಳಿ ವೃತ್ತ ನಿರೀಕ್ಷಕ ಟಿ.ವಿ. ದೇವರಾಜ್ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು.

ಇದೇ ಮಾ.14ರಂದು ಹೊನ್ನಾಳಿ ಸಿಪಿಐ ಟಿ.ವಿ. ದೇವರಾಜ್ ನೇತೃತ್ವದಲ್ಲಿ ನ್ಯಾಮತಿ ಪಿಎಸ್ ಐ ರಮೇಶ್ ಹಾಗೂ ಸಿಬ್ಬಂದಿಗಳಾದ ಹರೀಶ , ಎನ್. ರವಿನಾಯಕ, ಚಂದ್ರಶೇಖರಪ್ಪ, ಉಮೇಶ, ಮೌನೇಶಾಚಾರಿ, ಕೆ. ರಾಮಪ್ಪ, ಜಿ. ಸಿದ್ದಪ್ಪ, ಕೆ. ಮಂಜಪ್ಪ, ಹೊನ್ನಾಳಿ ಪೊಲೀಸ್ ಸಿಬ್ಬಂದಿಗಳಾದ ಬಸವರಾಜ ವೆಂಕಟರಾಮ, ಫೈರೋಜ್ ಖಾನ್, ಜಗದೀಶ್ ಒಳಗೊಂಡ ತಂಡವು ಸವಳಂಗ ಕಡೆ ತೆರಳುವ ವಾಹನಗಳ ತಪಾಸಣೆ ಮಾಡುತ್ತಿರುವಾಗ ಆಯನೂರು ಕಡೆಯಿಂದ ಸವಳಂಗ ಕಡೆಗೆ ಬಂದ ಓಮಿನಿ ವಾಹನವನ್ನು ತಪಾಸಣೆ ನಡೆಸಿದಾಗ ಬಂಧಿತ ಆರೋಪಿಗಳು 4 ಅಡಿಕೆ ಚೀಲಗಳ ಸಹಿತ ಸೆರೆ ಸಿಕ್ಕಿದ್ದಾರೆ. ವಿಚಾರಿಸಿದಾಗ ಮಾದಾಪುರ ಗ್ರಾಮದಲ್ಲಿ ಹಾಗೂ ಶಿವಮೊಗ್ಗದ ಮುದುವಾಲ ಗ್ರಾಮದಲ್ಲಿ ಅಡಿಕೆ ಕಳ್ಳತನ ಮಾಡಿರುವುದಾಗಿ ಬಾಯಿ ಬಿಟ್ಟಿದ್ದಾರೆ.

## ವಿದ್ಯಾರ್ಥಿ ಸಂಘದ ಉದ್ಘಾಟನೆ

ದಾವಣಗೆರೆ : ಅಥಣಿ ಕಾಲೇಜಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ಇಂದು ಬೆಳಿಗ್ಗೆ 11 ಕ್ಕೆ ನಡೆಯಲಿದೆ. ಅಥಣಿ ವೀರಣ್ಣ ಅಧ್ಯಕ್ಷತೆ ವಹಿಸುವರು. ಪ್ರೊ. ಹೆಚ್.ಎಸ್. ಅನಿತ ಕಾರ್ಯಕ್ರಮ ಉದ್ಘಾಟಿಸುವರು. ಅತಿಥಿಗಳಾಗಿ ಆರ್.ನಾಗರಾಜಪ್ಪ, ಎನ್.ಎ. ಮುರುಗೇಶ್, ಅಥಣಿ ಪ್ರಶಾಂತ್ ಭಾಗವಹಿಸುವರು.

## ಹೆರಿಗಾಗಿ ಬಂದಿದ್ದ ತಾಯಿ ಜೊತೆ ಮಗು ಸಾವು : ಪ್ರತಿಭಟನೆ



ದಾವಣಗೆರೆ, ಮಾ.15- ಹೆರಿಗಾಗಿ ಬಂದಿದ್ದ ತಾಯಿ ಜೊತೆಗೆ ಗರ್ಭದಲ್ಲಿಯೇ ಮಗು ಸಾವನ್ನಪ್ಪಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷವೇ ಕಾರಣ ಎಂದು ಆರೋಪಿಸಿ, ನಗರದ ಜಿಲ್ಲಾಸ್ಪತ್ರೆಯ ಆವರಣದಲ್ಲಿ ಮೃತ ಮಹಿಳೆ ಸಂಬಂಧಿಕರು ಪ್ರತಿಭಟನೆ ನಡೆಸಿದರು.

ಹರಪನಹಳ್ಳಿ ತಾಲ್ಲೂಕಿನ ನಿಲವಂಜಿಯ ಕಾವ್ಯ (21) ಸಾವನ್ನಪ್ಪಿದ ಮಹಿಳೆ. ಭಾನುವಾರ ತಡರಾತ್ರಿ ಹೆರಿಗೆಗಾಗಿ ಕಾವ್ಯ ಆಸ್ಪತ್ರೆಗೆ ದಾಖಲಾಗಿದ್ದರು. ಆದರೆ, ಗರ್ಭದಲ್ಲಿಯೇ ಮಗು ಸಾವನ್ನಪ್ಪಿದ್ದು, ಜೊತೆಗೆ ತಾಯಿ ಕಾವ್ಯ ಸಹ ಸಾವನ್ನಪ್ಪಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಆರೋಪಿಸಿ ಮೃತಳ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಆಸ್ಪತ್ರೆ ಆವರಣದಲ್ಲಿ ಬಿಗುವಿನ ವಾತಾವರಣ ಉಂಟಾಗಿತ್ತು. ಸ್ಥಳಕ್ಕೆ ಬಡಾವಣೆ ಠಾಣೆ ಪೊಲೀಸರು ಆಗಮಿಸಿ ವಾತಾವರಣ ತಿಳಿಗೊಳಿಸಲು ಪ್ರಯತ್ನಿಸಿದರು.

## ಗಾಂಜಾ ಪ್ರಕರಣದಲ್ಲಿ ಸಿಲುಕಿಸಲು ಹೋದವನೇ ಅಂದರ್



ಕೂಡ್ಲಿಗಿ, ಮಾ.15- ಪ್ರೀತಿಗೆ ಅಡ್ಡಿಯಾದನೆಂಬ ದ್ವೇಷ ಇಟ್ಟುಕೊಂಡ ಯುವಕನೊಬ್ಬ ಅಡ್ಡಿಯಾದವನ ಮನೆ ಮೇಲೆ ಗಾಂಜಾ ಎಸೆದು, ಪೊಲೀಸರಿಗೆ ಕರೆ ಮಾಡಿ ಸಿಲುಕಿಸಲು ಹೋಗಿ, ತಾನೇ ಅಂದರ್ ಆದ ಘಟನೆ ಕೂಡ್ಲಿಗಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ


ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹಲಗಾಪುರದ ಕೆ. ಚನ್ನಬಸಪ್ಪ ಎಂಬಾತನೇ ಜೈಲು ಪಾಲಾದ ಆರೋಪಿಯಾಗಿದ್ದಾನೆ.

ಈತ ಬಡೇಲಡಕು ಗ್ರಾಮದ ಯುವತಿಯನ್ನು ಪ್ರೀತಿಸುತ್ತಿದ್ದು, ಇವರಿಬ್ಬರು ಪರಸ್ಪರ ಕೂಡ್ಲಿಗಿಯಲ್ಲಿ ಭೇಟಿಯಾಗುತ್ತಿದ್ದುದನ್ನು ಕಂಡು ಬಡೇಲಡಕು ಬಸವರಾಜನು ಯುವತಿಯ ಮನೆಯಲ್ಲಿ ತಿಳಿಸಿದ್ದರಿಂದ ಪ್ರೀತಿಗೆ ಕಡಿವಾಣ ಬಿತ್ತು.

ಇದೇ ದ್ವೇಷದಲ್ಲಿ ಚನ್ನಬಸಪ್ಪ ಹೇಗಾದರೂ ಮಾಡಿ ಬಸವರಾಜನ ಮೇಲೆ ಕೇಸ್ ಮಾಡಿಸಬೇಕೆಂದು ಡ್ರಗ್ಸ್ ಹಾಗೂ ಗಾಂಜಾ ಕೇಸಲ್ಲಿ ಸಿನಿಮಾ ನಟರು ಜೈಲು ಸೇರಿದ ಘಟನೆ ನೆನಪು ಮಾಡಿಕೊಂಡ ಚನ್ನಬಸಪ್ಪನು ತನ್ನ ಪ್ರೀತಿಗೆ ಅಡ್ಡಿಯಾದ ಬಸವರಾಜನ ಮನೆ ಮೇಲೆ ತಾನು ಖರೀದಿಸಿ ತಂದ ಗಾಂಜಾವನ್ನು ಬಿಸಾಕಿ, ಪೊಲೀಸರಿಗೆ ಕರೆ ಮಾಡಿ ಬಸವರಾಜನ ಮನೆ ಮೇಲೆ ಗಾಂಜಾ ಇದೆ ಎಂದು ತಿಳಿಸಿದ್ದಾನೆ.

ಪೊಲೀಸ್ ಸಿಬ್ಬಂದಿಗಳಾದ ಶರಣಪ್ಪ ಮತ್ತು ಮಂಜುನಾಥ, ಕೂಡ್ಲಿಗಿ ಪಿಎಸ್‌ಐ ಸುರೇಶ ನೇತೃತ್ವದಲ್ಲಿ ಮತ್ತು ಬಳ್ಳಾರಿ ಎಸ್‌ಪಿ ಅಡಾವತ್, ಎಎಸ್‌ಪಿ ಲಾವಣ್ಯ, ಕೂಡ್ಲಿಗಿ ಡಿವೈಎಸ್‌ಪಿ ಹರೀಶ್ ರೆಡ್ಡಿ ಮತ್ತು ಕೂಡ್ಲಿಗಿ ಸಿಪಿಐ ವಸಂತ ವಿ. ಅಸೋದೆ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

### ಕೊಟ್ರಪ್ಪ ಮುದುಕಪ್ಪನವರ ನಿಧನ



ಹರಿಹರ ತಾಲ್ಲೂಕು ಕಮಲಾಪುರ ಗ್ರಾಮದ ವಾಸಿ ಕೊಟ್ರಪ್ಪ ಮುದುಕಪ್ಪನವರ (86) ಅವರು ಸೋಮವಾರ ಸಂಜೆ ಸ್ವಗ್ರಾಮದಲ್ಲಿ ನಿಧನರಾದರು. ಪತ್ರಕರ್ತ ಗಣೇಶ್ ಕಮ್ಲಾಪುರ ಸೇರಿದಂತೆ ಐವರು ಪುತ್ರರು ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16-03-2021ರ ಮಂಗಳವಾರ ಬೆಳಿಗ್ಗೆ 11 ಕ್ಕೆ ಸ್ವಗ್ರಾಮ ಕಮಲಾಪುರದ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು.

### ಗುಡ್ಡಣ್ಣನವರ ರೇಣುಕಮ್ಮ ನಿಧನ



ದಾವಣಗೆರೆ ತಳವಾರ ಬೀದಿ ವಾಸಿ ದಿ. ಗುಡ್ಡಣ್ಣನವರ ನಾಗಪ್ಪ ಇವರ ಧರ್ಮಪತ್ನಿ ಶ್ರೀಮತಿ ರೇಣುಕಮ್ಮ (64) ಇವರು ದಿನಾಂಕ 15.03.2021 ರಂದು ಸೋಮವಾರ ರಾತ್ರಿ 9 ಗಂಟೆಗೆ ನಿಧನರಾಗಿದ್ದಾರೆ. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.03.2021 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

### ಲಲಿತಮ್ಮ ಮಡಿವಾಳರ ನಿಧನ



ದಾವಣಗೆರೆ ಲೇಬರ್ ಕಾಲೋನಿ, 9ನೇ ಕ್ರಾಸ್ ವಾಸಿ ಮಡಿವಾಳರ ಹಾಲೇಶಪ್ಪ ಇವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ (60) ಇವರು ದಿನಾಂಕ 15.03.2021 ರ ಸೋಮವಾರ ಸಂಜೆ 6.45 ಕ್ಕೆ ನಿಧನರಾಗಿದ್ದಾರೆ. ಪತಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು 16.03.2021 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

# ರಾಜ್ಯ ಬಜೆಟ್ ವಿರೋಧಿಸಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ

## ಹರಪನಹಳ್ಳಿಯಲ್ಲಿ ಉಪವಾಸ ಸತ್ಯಾಗ್ರಹ



ಹರಪನಹಳ್ಳಿ,ಮಾ.15- ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಸೋಮವಾರ ಉಪವಾಸ ಸತ್ಯಾಗ್ರಹ ನಡೆಸಲಾಯಿತು.

ಅಂಗನವಾಡಿ ಮಹಿಳೆಯರ ಬೇಡಿಕೆಗಳ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವಾಗದಿರುವುದನ್ನು ಖಂಡಿಸಿ, ಕರ್ನಾಟಕ ರಾಜ್ಯ ಅಂಗನವಾಡಿ ರಾಜ್ಯ ಸಮಿತಿಯ ಕರೆ ಮೇರೆಗೆ ಉಪವಾಸ ಸತ್ಯಾಗ್ರಹ ನಡೆಸಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಅಂಗನವಾಡಿ ಮಹಿಳೆಯರ ಬೇಡಿಕೆಗಳ ಬಗ್ಗೆ ಬಜೆಟ್‌ನಲ್ಲಿ ಅನುಕೂಲ ಮಾಡುವುದಾಗಿ ಸಚಿವೆ ಶಶಿಕಲಾ ಜೊಲ್ಲೆ ಭರವಸೆ ನೀಡಿದ್ದರು. ಆದರೆ ಬಜೆಟ್‌ನಲ್ಲಿ ಯಾವುದೇ ಪ್ರಸ್ತಾಪವಾಗಲಿಲ್ಲ. ಕಾರ್ಯಕರ್ತರಿಗೆ ಅನ್ಯಾಯವಾಗಿದೆ. ಆದ್ದರಿಂದ ಯಾವುದೇ ರೀತಿ ಸರ್ವೆ, ಎಂ.ಪಿ.ಆರ್. ವರದಿಯನ್ನು ನೀಡಲಾಗುವುದಿಲ್ಲ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರನ್ನು ಖಾಯಂಗೊಳಿಸಬೇಕು, ಸೇವಾ ಹಿರಿತನದ ಆಧಾರದಲ್ಲಿ ಗೌರವ ಧನ ನೀಡಬೇಕು. ಇಎಸ್‌ಐ ಮತ್ತು ಪಿ.ಎಫ್. ಜಾರಿಯಾಗಬೇಕು. ನಿವೃತ್ತಿ ಆದವರಿಗೆ ಬೇಗನೆ ಇಡಿಗಂಟು ನೀಡಬೇಕು, ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಅಂಗನವಾಡಿ ಕೇಂದ್ರದಲ್ಲಿ ತೆರೆಯಬೇಕು, ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ನೀಲಗುಂದ ಗುಡ್ಡದ ವಿರಕ್ತಮಠದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿಗಳು ಉಪವಾಸ ಸತ್ಯಾಗ್ರಹಕ್ಕೆ ಬೆಂಬಲ ನೀಡಿ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಅಧ್ಯಕ್ಷ ಗುಡಿಹಳ್ಳಿ ಹಾಲೇಶ್, ಕಾರ್ಯದರ್ಶಿ ಜಯಲಕ್ಷ್ಮಿ. ಖಜಾಂಚಿ ಸುಮಾ, ಮುಖಂಡರಾದ ಮಂಜುಳಾ ಉಪ್ಪಾರ, ಮಾಲತಿ, ಎಸ್. ಚಂದ್ರಮ್ಮ, ಬಿ.ದ್ರೌಪದಿಬಾಯಿ, ಎ.ಆರ್. ಅಕ್ಕಮ್ಮ, ಎಂ. ಹಜ್ರತ್‌ಬಾನು, ಟಿ. ಕೊಟ್ರಮ್ಮ, ಬಿ. ಸುನೀತಾ, ಕೆ.ಈಶ್ವರಿ ಹಾಗೂ ಇನ್ನಿತರರಿದ್ದರು.

## ಜಗಳೂರಿನಲ್ಲಿ ತಹಶೀಲ್ದಾರ್‌ಗೆ ಮನವಿ



ಜಗಳೂರು, ಮಾ.15- ತಮ್ಮ ಬೇಡಿಕೆಗಳನ್ನು ಈಡೇರಿಸದ 2021-22ರ ಬಜೆಟ್ ಅನ್ನು ವಿರೋಧಿಸಿ ಎಐಟಿಯುಸಿ ನೇತೃತ್ವದಲ್ಲಿ ನಡೆಯುತ್ತಿರುವ ರಾಜ್ಯ ವ್ಯಾಪಿ ಹೋರಾಟವನ್ನು ಬೆಂಬಲಿಸಿ, ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಇಂದು ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತ, ದಾವಣಗೆರೆ ರಸ್ತೆ, ಡಾ. ಬಿ.ಆರ್. ಅಂಬೇಡ್ಕರ್ ವೃತ್ತದ ಮೂಲಕ ಸಾಗಿ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮಿನಿ ವಿಧಾನ ಸೌಧಕ್ಕೆ ತೆರಳಿ ತಹಶೀಲ್ದಾರ್ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಎಐಟಿಯುಸಿ ತಾಲ್ಲೂಕು ಕಾರ್ಯದರ್ಶಿ ಮಹಮ್ಮದ್ ಬಾಷಾ ಮಾತನಾಡಿ, ಮಾರ್ಚ್ 2 ರಂದು ಬೆಂಗಳೂರು ಚಲೋ ಹೋರಾಟ ನಿರತರಾಗಿದ್ದ ವೇಳೆ ಸಂಘಟನೆಯ ಮುಖಂಡರುಗಳ ಸಮ್ಮುಖದಲ್ಲಿ ಸಭೆ ಕರೆದು ಸರ್ಕಾರ ಬಜೆಟ್‌ನಲ್ಲಿ ಬೇಡಿಕೆಗಳ ಈಡೇರಿಕೆಗೆ ನೀಡಿದ್ದ ಭರವಸೆ ಹುಸಿಯಾಗಿದೆ ಎಂದರು.

2015 ನಂತರ ನಿವೃತ್ತಿಯಾಗಿರುವ 7294 ಕಾರ್ಯ ಕರ್ತೆಯರಿಗೆ ಮಾಸಿಕ ಪಿಂಚಣಿ 5,000 ರೂಪಾಯಿ ಹಾಗೂ ಕಾರ್ಯಕರ್ತೆಯರ ಹಿರಿತನದ ಸೇವೆ ಪರಿಗಣಿಸಿ ಗೋವಾ ಮಾದರಿಯಲ್ಲಿ ಗೌರವ ಧನ ನಿಗದಿಗೊಳಿಸಬೇಕು, ಅಂಗನವಾಡಿಗಳಲ್ಲಿಯೇ ಎಲ್‌ಕೆಜಿ, ಯುಕೆಜಿ ಆರಂಭಿಸಿ, ಕಾರ್ಯಕರ್ತೆಯರಿಗೆ ತರಬೇತಿ ನೀಡಬೇಕು ಎಂದು ಆಗ್ರಹಿಸಿದರು.

ಎಐಎಸ್‌ಎಫ್ ರಾಜ್ಯ ಮುಖಂಡ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಬಜೆಟ್‌ನಲ್ಲಿ ನಿರ್ಲಕ್ಷಿಸಿರುವುದು ಖಂಡನೀಯ ಎಂದರು.

ಫೆಡರೇಷನ್‌ನ ತಾಲ್ಲೂಕು ಗೌರವಾಧ್ಯಕ್ಷೆ ಸುಶೀಲಮ್ಮ, ತಾಲ್ಲೂಕು ಅಧ್ಯಕ್ಷೆ ಹಾಲಮ್ಮ, ಪದಾಧಿಕಾರಿಗಳಾದ ನಾರಮ್ಮ, ಬಸವಣ್ಣಮ್ಮ, ಭರಮಕ್ಕ, ಗೌರಮ್ಮ, ಶಶಿಕಲಾ, ಪುಷ್ಪ, ಶಾಂತವೀರಮ್ಮ, ನಾಗರತ್ನಮ್ಮ, ಜಯಮ್ಮ, ಭಾಗ್ಯಮ್ಮ, ಕಮಲಮ್ಮ, ಮಂಜಮ್ಮ ಮತ್ತಿತರರು ಭಾಗವಹಿಸಿದ್ದರು.

## ಸಿಐಟಿಯು ನೇತೃತ್ವದಲ್ಲಿ ಧರಣಿ



ಹರಪನಹಳ್ಳಿ, ಮಾ.15- ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಕರೆಯ ಮೇರೆಗೆ ತಾಲ್ಲೂಕು ಅಂಗನವಾಡಿ ನೌಕರರು ಉಪವಾಸ ಸತ್ಯಾಗ್ರಹ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೆ ಹೆಚ್ಚುವರಿ ಕೆಲಸಗಳಿಗೆ ಬಹಿಷ್ಕಾರ ಹಾಕುತ್ತೇವೆ ಎಂದು ಪ್ರತಿಭಟನೆ ನಡೆಸಿದರು.

ಪಟ್ಟಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮುಂದೆ ಸಿಐಟಿಯು ನೇತೃತ್ವದಲ್ಲಿ ಅಂಗನವಾಡಿ ನೌಕರರು ಉಪವಾಸ ಸತ್ಯಾಗ್ರಹ ನಡೆಸಿ ಮನವಿ ಸಲ್ಲಿಸಿದರು.

ಅಂಗನವಾಡಿ ನೌಕರರು ಕಡಿಮೆ ಸೌವಲತ್ತುಗಳಲ್ಲಿ ದುಡಿಯುತ್ತಿದ್ದಾರೆ. ಅಲ್ಲದೇ ಕೊರೊನಾ ಸಂಕಷ್ಟದಲ್ಲಿ ಷರತ್ತುಗಳು ಇಲ್ಲದೇ ಜೀವದ ಹಂಗು ತೊರೆದು ಕೆಲಸ ನಿರ್ವಹಿಸಿ 28 ನೌಕರರು ಬಲಿಯಾಗಿದ್ದಾರೆ.

ಸರ್ಕಾರ ನೀಡಿದ ಭರವಸೆಯಂತೆ ಸೇವಾ ಜೇಷ್ಠತೆ ಆಧಾರದಲ್ಲಿ ನೀಡಬೇಕಾಗಿದ್ದ ಹಣವನ್ನು ಪಾವತಿಸಿಲ್ಲ. ನಿವೃತ್ತರಿಗೆ ನೀಡಬೇಕಾದ ಇಡಿ ಗಂಟನ್ನು ಪರಿಗಣಿಸಿಲ್ಲ.

ಸಮಾಜ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಬಜೆಟ್‌ನಲ್ಲಿ ತಮ್ಮ ಬೇಡಿಕೆಗಳನ್ನು ಈಡೇರಿಸುವುದಾಗಿ ತಿಳಿಸಿದ್ದರೂ, ಒಂದಾದರೂ ಇಲ್ಲಿಯವರೆಗೂ ಸೇರ್ಪಡೆಯಾಗಿಲ್ಲ.

ಇನ್ನಾದರೂ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸುತ್ತೇವೆ ಎಂದರು.

ಮಾ.16 ರಿಂದ ಅಂಗನವಾಡಿ ನೌಕರರು ಹೆಚ್ಚುವರಿ ಕೆಲಸಗಳಾದ ಇ-ಸರ್ವೇ, ಆರ್‌ಡಿಪಿಆರ್, ಬಿಪಿಎಲ್, ಭಾಗ್ಯಲಕ್ಷ್ಮಿ, ಮಾತೃವಂದನಾ, ಸ್ತ್ರೀಶಕ್ತಿ, ಚುನಾವಣೆ ಇನ್ನೂ ಮುಂತಾದ ಕೆಲಸಗಳನ್ನು ಬಹಿಷ್ಕರಿಸುತ್ತೇವೆ. ಅಲ್ಲದೇ ಮಿನಿ ಅಂಗನವಾಡಿ ಕೇಂದ್ರಗಳಲ್ಲಿ ಸಹಾಯಕಿಯರನ್ನು ಕೊಡುವ ತನಕ ಅಡುಗೆ ಮಾಡುವುದಿಲ್ಲ ಎಂದು ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು ಮನವಿ ಸಲ್ಲಿಸಿದ್ದೇವೆ ಎಂದರು.

ತಾಲ್ಲೂಕು ಅಧ್ಯಕ್ಷೆ ಎಸ್. ಜಲಜಮ್ಮ, ಮುಖಂಡರಾದ ರಶೀದಾ, ಪಾರ್ವತಿ, ಸುನೀತಾ, ಈರಮ್ಮ, ಮಹಾದೇವಿ ಇನ್ನಿತರರು ಭಾಗವಹಿಸಿದ್ದರು.

## ಹೊನ್ನಾಳಿ : ರಾಜ್ಯ ಬಜೆಟ್‌ಗೆ ಖಂಡನೆ



ಹೊನ್ನಾಳಿ, ಮಾ.15- ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಎಐಟಿಯುಸಿ ಫೆಡರೇಷನ್ ಹೊನ್ನಾಳಿ ಘಟಕದ ವತಿಯಿಂದ ಪಟ್ಟಣದ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಯಿತು.

ಸಿಐಟಿಯು ಸಂಘಟನೆಯ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ವತಿಯಿಂದ ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಎದುರು ನೂರಾರು ಕಾರ್ಯಕರ್ತೆಯರು ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಿದರು.

ಘಟಕದ ಅಧ್ಯಕ್ಷೆ ಚನ್ನಮ್ಮ ಮಾತನಾಡಿ, ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಯಾವುದೇ ಬೇಡಿಕೆಗಳನ್ನು ಈಡೇರಿಸಿಲ್ಲ. ಇದನ್ನು ಖಂಡಿಸಿ ರಾಜ್ಯಾದ್ಯಂತ ಒಂದು ದಿನದ ಪ್ರತಿಭಟನೆಯನ್ನು ನಡೆಸಲಾಗುತ್ತಿದೆ ಎಂದರು.

ತಹಶೀಲ್ದಾರ್ ಬಸನಗೌಡ ಕೋಟೂರ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸಂಘಟನೆಯ ಉಪಾಧ್ಯಕ್ಷೆ ರೇಣುಕಮ್ಮ, ಗೌರವಾಧ್ಯಕ್ಷೆ ಕೆ.ಜಿ. ಗೀತಾ, ಕಾರ್ಯದರ್ಶಿ ಎ.ಎಸ್. ವಸಂತ, ಖಜಾಂಚಿ ಶಾರದಾದೇವಿ ಇನ್ನಿತರರಿದ್ದರು.

# ನೂತನ ಕಾಯ್ದೆಗಳನ್ನು ವಿರೋಧಿಸಿ 22 ರಂದು ವಿಧಾನಸೌಧ ಚಲೋ

ದಾವಣಗೆರೆ, ಮಾ.15- ರೈತ-ಕಾರ್ಮಿಕ ವಿರೋಧಿ ಕೃಷಿ ಕಾಯ್ದೆಗಳ ರದ್ಧತಿಗಾಗಿ ಇದೇ ಮಾರ್ಚ್ 22 ರಂದು ವಿಧಾನಸೌಧ ಚಲೋ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 112 ದಿನಗಳಿಂದ ದೆಹಲಿ ಬಳಿ ನಡೆಯುತ್ತಿರುವ ರೈತ ಚಳವಳಿ ಇಡೀ ದೇಶದ ಜನರ ಸಲುವಾಗಿ ನಡೆಯುತ್ತಿರುವ ಚಳವಳಿಯಾಗಿದೆ ಎಂದರು.

ರಾಜ್ಯದಲ್ಲಿ 424 ಎಪಿಎಂಸಿ ಗಳಿವೆ. ಸುಮಾರು 7 ಲಕ್ಷ ಕೋಟಿ ರೂ. ಆಸ್ತಿಯನ್ನು ಎಪಿಎಂಸಿಗಳು ಹೊಂದಿವೆ. ಇವುಗಳನ್ನು ಬಲ ಪಡಿಸುವ ಬದಲು ದುರ್ಬಲ ಗೊಳಿಸುವ ಎಲ್ಲಾ ಕಾರ್ಯಗಳನ್ನೂ ಸರ್ಕಾರ ನಡೆಸುತ್ತಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರ ಭೂ ಸುಧಾರಣಾ ಕಾಯ್ದೆ ತಿದ್ದುಪಡಿಗೆ ಮುಂದಾಗುವ ಮೂಲಕ ಕೃಷಿ ಭೂಮಿ ಕಾರ್ಪೊರೇಟ್ ಕಂಪನಿಗಳ, ಭೂ ಮಾಫಿಯಾಗಾರರ ಪಾಲಾಗಲು ಸಹಕಾರ ನೀಡುತ್ತಿದೆ ಎಂದರು. ಗೋ ಹತ್ಯೆ ನಿಷೇಧಕ್ಕೆ ಮುಂದಾದ ಸರ್ಕಾರದ ಕ್ರಮದಿಂದ ರೈತರ ಬದುಕಿನ ಮೇಲೆ ದುಷ್ಪರಿಣಾಮಗಳಾಗುತ್ತವೆ. ಈ ಕಾಯ್ದೆ ಜಾರಿಗೂ ಮುನ್ನ ಗೋ ಶಾಲೆಗಳನ್ನು ತೆರೆಯುವ ಬಗ್ಗೆ ಸರ್ಕಾರ ಚಿಂತಿಸಬೇಕು ಎಂದು ಹೇಳಿದರು.

ಈ ಎಲ್ಲಾ ಜನವಿರೋಧಿ ಕಾಯ್ದೆಗಳನ್ನು ವಿರೋಧಿಸಿ ವಿಧಾನಸೌಧ ಚಲೋ ಹಮ್ಮಿಕೊಳ್ಳಲಾಗಿದೆ. ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ. ಇದಕ್ಕೂ ಮುನ್ನ ಬೆಳಿಗ್ಗೆ 11 ಗಂಟೆಗೆ ಸಿಟಿ ರೈಲ್ವೇ ನಿಲ್ದಾಣದಿಂದ ಮೆರವಣಿಗೆ ನಡೆಯಲಿದೆ ಎಂದು ಹೇಳಿದರು.

ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮಾತನಾಡಿ, ಅಧಿವೇಶನದಲ್ಲಿ 7 ತಾಸು ತ್ರಿಫೇಸ್ ವಿದ್ಯುತ್ ನೀಡುತ್ತಿರುವುದಾಗಿ ಸಚಿವರು ಹೇಳುತ್ತಾರೆ. ಆದರೆ ಇಲ್ಲಿ ಐದು ತಾಸೂ ಸಹ ನೀಡುತ್ತಿಲ್ಲ. ಅಧಿಕಾರಿಗಳು ಕೇಳಿದರೆ ಲೈನ್ ಸರಿ ಇಲ್ಲ ಎಂಬ ಕಾರಣ ಹೇಳುತ್ತಿದ್ದಾರೆ. ಬೇಸಿಗೆ ವೇಳೆ ನೀರು ಸಮರ್ಪಕವಾಗಿ ಸಿಗದಿದ್ದರೆ ಇಳುವರಿ ಕಡಿಮೆಯಾಗಿ ಜಿಲ್ಲೆಯಲ್ಲಿಯೇ ಸಾವಿರ ಕೋಟಿ ರೂ. ನಷ್ಟ ಸಂಭವಿಸುತ್ತದೆ ಎಂದು ಹೇಳಿದರು.

ಕನಗೊಂಡನಹಳ್ಳಿ ಬಳಿ ಸುಮಾರು 12 ಕಿ.ಮೀ ಕಾಲುವೆ ನಿರ್ಮಿಸಲಾಗಿದೆ. ಆದರೆ ಇಲ್ಲಿಯವರೆಗೆ ನಾಲೆಯ ನೀರು ಹರಿಸಲಾಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕಾಲುವೆಯಲ್ಲಿ ನೀರು ಹರಿಸಬೇಕು. ಇಲ್ಲವೇ ಕಾಮಗಾರಿ ಹಣವನ್ನು ವಾಪಾಸ್ ಸರ್ಕಾರಕ್ಕೆ ಕೊಡಬೇಕು ಎಂದರು.

ಕುರ್ಕಿಯಿಂದ ಮುಕ್ತೇನಹಳ್ಳಿ ವರೆಗೆ ರಸ್ತೆ ಸಂಪೂರ್ಣ ಹಾಳಾಗಿದ್ದು, ಯಾವ ಜನಪ್ರತಿನಿಧಿಗಳಿಗೂ ಈ ಬಗ್ಗೆ ಆಸಕ್ತಿ ಇಲ್ಲವಾಗಿದೆ ಎಂದ ರವಿಕುಮಾರ್, ಈ ಬಗ್ಗೆ ಇದೇ ತಿಂಗಳ 31ರವ ರೆಗೆ ಗಡುವು ನೀಡುತ್ತೇವೆ. ರಸ್ತೆ ರಿಪೇರಿ ಮಾಡದ ಪಿಡಬ್ಲ್ಯೂಡಿ ಇಲಾಖೆ, ವಿದ್ಯುತ್ ನೀಡದ ಬೆಸ್ಕಾಂ ಹಾಗೂ ನೀರು ಕೊಡದ ನೀರಾವರಿ ಇಲಾಖೆಗಳ ವಿರುದ್ಧ ಮುಂದಿನ ತಿಂಗಳು ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡರಾದ ವಸಂತಕುಮಾರ್, ಇಟಗಿ ಬಸವರಾಜಪ್ಪ, ಪ್ರಸಾದ್, ಗದಿಗೇಶ್, ಅಶೋಕ ಗೌಡ್ರು ಮಾಯಕೊಂಡ, ಮಂಜುನಾಥ್ ಇತರರು ಉಪಸ್ಥಿತರಿದ್ದರು.

## 21 ರಂದು ವಧು-ವರರ ಸಮಾವೇಶ

ದಾವಣಗೆರೆ, ಮಾ.15- ಕ್ಷತ್ರಿಯ ಮರಾಠ ವಧು-ವರರ ಮುಖಾ ಮುಖಿ 3ನೇ ಸಮಾವೇಶವು ಇದೇ ದಿನಾಂಕ 21ರ ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ನಗರದ ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ವಕೀಲ ರಾಘವೇಂದ್ರ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಈ ಸಮಾವೇಶ ಹಮ್ಮಿಕೊಂಡಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ಯುವಕ-ಯುವತಿಯರು ಆಗಮಿಸಲಿದ್ದಾರೆ ಎಂದರು. ವಿಚ್ಛೇದಿತರು ಭಾಗವಹಿಸಲು ಇಚ್ಛಿಸಿದಲ್ಲಿ ನ್ಯಾಯಾಲಯದಿಂದ ವಿಚ್ಛೇದನಾ ಪ್ರತಿ ತರಬೇಕು ಎಂದು ಹೇಳಿದರು.

ಕೃಷ್ಣರಾವ್ ಸಾವಂತ್, ಹನುಮಂತರಾವ್ ಸುರ್ವೆ, ಸುರೇಂದ್ರ ರಾವ್, ಶ್ರೀನಿವಾಸ ಕಾಟೆ, ರಾಘವೇಂದ್ರ ಚೌಹ್ವಾಣ್, ಸುರೇಶ್ ರಾವ್ ಜಾಧವ್, ಚೇತನಾ ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಜಮೀನು ಮಾರಾಟಕ್ಕಿದೆ**

ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರು ಪಟ್ಟಣದ ಐತಿಹಾಸಿಕ ಪುಷ್ಕರಣಿ ಸಮೀಪದಲ್ಲಿ ರಾಜ್ಯ ಹೆದ್ದಾರಿ SH 76 (ದಾವಣಗೆರೆ-ಬೀರೂರು) ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ವಸತಿ ಹಾಗೂ ವಾಣಿಜ್ಯ ಉದ್ದೇಶಕ್ಕೆ ಯೋಗ್ಯವಾಗಿರುವ 1 ಎಕರೆ 15.5 ಗುಂಟೆ ಜಮೀನು ಮಾರಾಟಕ್ಕಿದೆ.

ಫೋ. : 95358 37800, 9741749717

# ಬಿಜೆಪಿ ಯುವ ಮೋರ್ಚಾ ದಾವಣಗೆರೆ ಉತ್ತರ ಮಂಡಲದ ಕಾರ್ಯಕಾರಿಣಿ ಸಭೆ




ದಾವಣಗೆರೆ, ಮಾ.15 - ಬಿಜೆಪಿ ಯುವ ಮೋರ್ಚಾ ದಾವಣಗೆರೆ ಉತ್ತರ ಮಂಡಲದ ಕಾರ್ಯಕಾರಿಣಿ ಸಭೆಯನ್ನು ಇತ್ತೀಚೆಗೆ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಅಧ್ಯಕ್ಷ ಸಚಿನ್ ವೆರ್ಣೇಕರ್ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರಿಸಲಾಯಿತು.

ಯುವ ಮೋರ್ಚಾ ಕಾರ್ಯಕ್ರಮಗಳ ವರದಿ ನೀಡಲಾಯಿತು. ಮುಂದಿನ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿಯ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಶಿವಪ್ರಕಾಶ್ ಡಿ ಆರ್ ಎಲ್, ಬಿಜೆಪಿಯ ರಾಜ್ಯ ಯುವ ಮೋರ್ಚಾ ಕಾರ್ಯದರ್ಶಿ ಮಂಜುನಾಥ್, ಜಿಲ್ಲಾ ಯುವ ಮೋರ್ಚಾ ಪದಾಧಿಕಾರಿಗಳಾದ ಯಲ್ಲೇಶ್, ಶ್ರೀಧರ್, ಕಿರಣ್, ಪ್ರಶಾಂತ್, ರಾಮು, ಮಂಡಲದ ಪದಾಧಿಕಾರಿಗಳಾದ ರಾಜು, ಸಚಿನ್, ಗಿರೀಶ್, ರಘು ಕಾರಿಗನೂರು, ಹರೀಶ್ ಶಾಮನೂರು, ಶಿವು ಶಾಮನೂರು, ಪವನ್ ಗೌಡ, ಕಿಶೋರ್, ವರುಣ್, ಪ್ರದೀಪ್, ಅನಿಲ್, ರಾಕೇಶ್, ವಿವೇಕ್, ಕಾರ್ತಿಕ್, ರಘು ತೊಗಟೆ, ರಘುವರನ್, ಚೇತನ್, ರೋಹಿತ್, ಪೃಥ್ವಿ, ಭರತ್, ಮತ್ತಿತರರು ಭಾಗವಹಿಸಿದ್ದರು.

## ಇಂದು ನಂದಿತಾವರೆ ತೇರು



ಮಲೇಬೆನ್ನೂರು ಸಮೀಪದ ನಂದಿತಾವರೆ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವವು ಇಂದು ತಡರಾತ್ರಿ ಜರುಗಲಿದೆ.

ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 6 ಗಂಟೆಗೆ ವಾಸನದ ನಂದಿಗೌಡ್ರು ಕುಟುಂಬದವರಿಂದ ದೇವರಿಗೆ ರುದ್ರಾಭಿಷೇಕ, ನಂತರ ಜಿಗಳಿ ಗ್ರಾಮದ ಗೌಡ್ರ ವಂಶಸ್ಥರಿಂದ ದೇವರಿಗೆ ಬಾಸಿಂಗ ಧಾರಣೆ ಮಾಡಲಾಗುವುದು. ಬೆಳಿಗ್ಗೆ 10.30 ರಿಂದ ಕಿವಿ ಚುಚ್ಚುವುದು, ಶಸ್ತ್ರ ಹಾಕುವುದು ಸೇರಿದಂತೆ ವಿವಿಧ ಹರಕೆ ಕಾರ್ಯಕ್ರಮಗಳು ನಡೆಯಲಿವೆ. ಇಂದು ಮತ್ತು ಬುಧವಾರ ದಿನವಿಡೀ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## 22ನೇ ವಾರ್ಡ್ ಟಿಕೆಟ್ ನೀಡಲಿ

ದಾವಣಗೆರೆ, ಮಾ.15- ಪಾಲಿಕೆಯ 22ನೇ ವಾರ್ಡ್ ಉಪ ಚುನಾವಣೆ ಅಭ್ಯರ್ಥಿಯನ್ನಾಗಿ ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮುಜಾಹಿದ್ ಅವರನ್ನು ಘೋಷಣೆ ಮಾಡಬೇಕೆಂದು ಕಿಸಾನ್ ಕಾಂಗ್ರೆಸ್ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್ ಎಸ್.ಕೆ. ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಪಕ್ಷಕ್ಕೆ ಸೇವೆ ಸಲ್ಲಿಸಿರುವ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸಿ ಸೇವೆ ಸಲ್ಲಿಸಲು ಅವಕಾಶ ನೀಡಬೇಕೆಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸುರೇಶ್ ಜಾಧವ್, ಹರೀಶ್, ಮೊಹಮ್ಮದ್ ಜಿಕ್ರಿಯಾ ಉಪಸ್ಥಿತರಿದ್ದರು.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಕಾನಿಅ/215/2020–21 ದಿನಾಂಕ: 12.03.2021

**ಬಹಿರಂಗ ಹರಾಜು ಪ್ರಕಟಣೆ**

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ನಿಗಮದ ಬಸ್ ನಿಲ್ದಾಣವನ್ನು ಪುನರ್ ನಿರ್ಮಿಸಲು ಕೆಡವಲಾದ ಕಟ್ಟಡದಲ್ಲಿ ದೊರೆತ ಉಪಯುಕ್ತ ಸಾಮಾಗ್ರಿಗಳನ್ನು ದಿನಾಂಕ: **24.03.2021**ರಂದು ಸಾರ್ವಜನಿಕ ಬಹಿರಂಗ ಹರಾಜು ನಿಗದಿಪಡಿಸಲಾಗಿರುತ್ತದೆ. ಜಿಎಸ್‌ಟಿ ನೋಂದಾಯಿತ ಹಾಗೂ ಪಾನ್‌ಕಾರ್ಡ್ ಹೊಂದಿರುವ ಆಸಕ್ತದಾರರು ಕಛೇರಿ ಕೆಲಸದ ವೇಳೆಯಲ್ಲಿ ಷರತ್ತು ಮತ್ತು ನಿಬಂಧನೆಗಳ ಪ್ರತಿಯನ್ನು ಪಡೆಯಬಹುದಾಗಿರುತ್ತದೆ. ಹರಾಜಿನಲ್ಲಿ ಭಾಗವಹಿಸುವವರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ **ರೂ. 25,000.00**ಗಳ ಡಿಡಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿ ಕರಾರಸಾ ನಿಗಮ ದಾವಣಗೆರೆ ವಿಭಾಗ ಇವರ ಹೆಸರಿನಲ್ಲಿ ಪಡೆದು ಪುನರ್ ನಿರ್ಮಿಸುತ್ತಿರುವ ಬಸ್ ನಿಲ್ದಾಣದ ಆವರಣದಲ್ಲಿ **ಬೆಳಗ್ಗೆ 11:00 ಗಂಟೆಗೆ** ಭಾಗವಹಿಸಬಹುದಾಗಿರುತ್ತದೆ.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ

ಕ.ರಾ.ರ.ಸಾ ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಉನಿನ/ಎಲ್‌ಸಿ/3121/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಸಾರ್ವಜನಿಕ ಪತ್ರಿಕಾ ಪ್ರಕಟಣೆ**

ಈ ಮೂಲಕ ಶ್ರೀ ಸುನೀಲ್ ಎನ್. ಜೈನ್ ಬಿನ್ ನತ್ಮಲ್ ಜೈನ್, ಡೋರ್ ನಂ. 720/1-2, ತ್ರಿಶೂಲ್ ಟಾಕೀಸ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ ಸಿಟಿ ವಾಸಿಯಾದ ನಾನು ಸಾರ್ವಜನಿಕರೆಲ್ಲರಿಗೂ ತಿಳಿಸಬಯಸುವುದೇನೆಂದರೆ, ಈ ಕೆಳಗೆ ವಿವರಿಸಿದ ಸೊತ್ತನ್ನು ಅದರ ಹಕ್ಕುದಾರಿ ಸ್ವಾಧೀನಾನುಭವಿಗಳು ಮತ್ತು ಖಾತಾಧಾರಿ ಮಾಲೀಕರಾದ ಶ್ರೀ ಶಿಕ್ಲಗಾರ ಮಹಮ್ಮದ್ ಯಾಸೀನ್, ಹಾವೇರಿ ಜಿಲ್ಲಾ, ರಾಣೇಬೆನ್ನೂರು ತಾಲ್ಲೂಕು ಮೇಡ್ಲೇರಿ ಗ್ರಾಮದ ವಾಸಿ ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸುತ್ತಿದ್ದು, ಷೆಡ್ಯೂಲ್ ಸೊತ್ತಿನ ಮೇಲೆ ಯಾವುದೇ ವ್ಯಕ್ತಿ, ಸಂಸ್ಥೆ, ಇತ್ಯಾದಿಯವರ್‍ಯಾರೇ ಆಗಲಿ ಯಾವುದೇ ತರಹದಲ್ಲಿ ಕಾನೂನಿನಡಿಯಲ್ಲಿ, ಯಾವುದೇ ತರಹದ ಹಕ್ಕು, ಆಸಕ್ತಿ ವಗೈರೆ ಇದ್ದಲ್ಲಿ, ಅಂತಹವರು ಈ ತಾರೀಖಿನಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ಕಾನೂನು ರೀತ್ಯಾ ತಮ್ಮ ಅಂತಹ ಹಕ್ಕು, ಆಸಕ್ತಿ ಇತ್ಯಾದಿಗಳನ್ನು ಸ್ಥಾಪಿಸುವಂತಹ ಅಥವಾ ಸಾಬೀತುಗೊಳಿಸತಕ್ಕಂತಹ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ತಿಳಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸೊತ್ತಿನ ಮೇಲೆ ಕಾನೂನು ರೀತ್ಯಾ ಯಾರದ್ದೂ, ಎಂದಿಗೂ, ಯಾವುದೇ ತರಹದ ಹಕ್ಕು, ಆಸಕ್ತಿ, ವಗೈರೆ ಇಲ್ಲವೆಂದು ಪರಿಗಣಿಸಿ, ಸದರಿ ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಖರೀದಿಸುವ ಬಗ್ಗೆ ಶುದ್ಧ ಕ್ರಯಪತ್ರವನ್ನು ಮಾಡಿಸಿಕೊಳ್ಳುತ್ತೇನೆ. ಹಾಗೂ ಆ ನಂತರದಲ್ಲಿ ಷೆಡ್ಯೂಲ್ ಸೊತ್ತಿನ ಹಕ್ಕು, ಸ್ವಾಧೀನಾನುಭವ ಇತ್ಯಾದಿಗಳ ಬಗ್ಗೆ ಯಾವುದೇ ತಂಟೆ-ತಕರಾರು ಮಾಡಲು, ಯಾವುದೇ ತರಹದ ಹಕ್ಕು ಸ್ಥಾಪಿಸಲು ಅಂತಹ ಯಾವುದೇ ವ್ಯಕ್ತಿ, ಸಂಸ್ಥೆ ಇತ್ಯಾದಿಯವರು ಯಾವುದೇ ತರಹದ ಹಕ್ಕನ್ನು ಪಡೆಯಲಾರರು ಮತ್ತು ತಮ್ಮ ಹಕ್ಕು ಕಳೆದುಕೊಂಡಿರುತ್ತಾರೆಂದು ಮತ್ತು ಸದರಿ ನನ್ನನ್ನು ಕಾನೂನು ರೀತ್ಯಾ ಯಾವುದೇ ರೀತಿಯಲ್ಲಿ ಜವಾಬ್ದಾರರನ್ನಾಗಲೀ, ಹೊಣೆಗಾರರನ್ನಾಗಿ ಮಾಡಲು ಸಾಧ್ಯವಿರುವುದಿಲ್ಲವೆಂದು ಈ ರೀತಿ ತಿಳಿಸುವ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇನೆ, ಎಲ್ಲರೂ ತಿಳಿಯಿರಿ.

**ಷೆಡ್ಯೂಲ್ :** ಹರಪನಹಳ್ಳಿ ತಾಲ್ಲೂಕು, ತೆಲಿಗಿ ಹೋಬಳಿ, ಕುಂಚೂರು ಗ್ರಾಮದ ರೀ. ಸರ್ವೆ ನಂಬರ್ 149/ಬಿ ಇದರ ವಿಸ್ತೀರ್ಣ ಎಕರೆ 1 ಸೆಂಟ್ಸ್ 20 ತರಹೆ 0-05 ಪೈಸೆ ಉಳ್ಳ ಜಮೀನಿಗೆ ಚಕ್ಕುಬಂದಿ : ಪೂರ್ವಕ್ಕೆ : ಅಲಗೇರಿ ನಿಂಗಪ್ಪನವರ ಜಮೀನು, ಪಶ್ಚಿಮಕ್ಕೆ : ಕೆರೆ ಅಂಗಳ, ಉತ್ತರಕ್ಕೆ : ಮಡಿವಾಳರ ಬಸಪ್ಪನವರ ಜಮೀನು, ದಕ್ಷಿಣಕ್ಕೆ : ಕೆರೆ ಅಂಗಳ. ಈ ಮಧ್ಯದ ಜಮೀನು ಒಂದು.

ಸಹಿ/- (ಸುನೀಲ್ ಎನ್. ಜೈನ್)

ಡೋರ್ ನಂ. 720/1-2, ತ್ರಿಶೂಲ್ ಟಾಕೀಸ್ ರಸ್ತೆ, ಕೆ.ಬಿ. ಬಡಾವಣೆ,

ದಾವಣಗೆರೆ ಸಿಟಿ (ಮೊಬೈಲ್ ನಂ. 9844133016)

ದಿನಾಂಕ : 15-03-2021

# ಬಾಕಿ ವೇತನಕ್ಕೆ ಆಗ್ರಹಿಸಿ ವಸತಿ ನಿಲಯ ಕಾರ್ಮಿಕರ ಪ್ರತಿಭಟನೆ




ದಾವಣಗೆರೆ, ಮಾ.15- ವಿವಿಧ ಇಲಾಖೆಗಳ ವಸತಿ ನಿಲಯಗಳಲ್ಲಿ ಕೆಲಸ ಮಾಡುವ ಹೊರಗುತ್ತಿಗೆ ಕಾರ್ಮಿಕರಿಗೆ ನವೆಂಬರ್ ತಿಂಗಳಿನಿಂದ ವೇತನ ಪಾವತಿಸದಿರುವುದನ್ನು ಖಂಡಿಸಿ, ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ (ಎಐಯುಟಿಯುಸಿ)ದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಜಿಲ್ಲಾ ಪಂಚಾಯತ್ ಮುಂಭಾಗದಲ್ಲಿಂದು ಪ್ರತಿಭಟನೆ ನಡೆಸಲಾಯಿತು.

ಅಡುಗೆ ಎಣ್ಣೆ, ಬೇಳೆ ಕಾಳುಗಳು ಮುಂತಾದ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಗಟ್ಟಬೇಕು. ಅಡುಗೆ ಅನಿಲ ಎಲ್ ಪಿ ಜಿ ಸಬ್ಸಿಡಿ ರದ್ದತಿಯನ್ನು ವಾಪಸ್ ಪಡೆಯಬೇಕು. ಪೆಟ್ರೋಲ್-ಡೀಸೆಲ್‌ಗಳ ತೆರಿಗೆಯನ್ನು ಕೈಬಿಟ್ಟು ಜನಸಾಮಾನ್ಯರ ಕೈಗೆಟಕುವಂತೆ ಅವುಗಳ ಬೆಲೆಯನ್ನು ನಿಗದಿಪಡಿಸಬೇಕು. ಪಡಿತರ ವಿತರಣೆಯಲ್ಲಿ ದವಸ-ಧಾನ್ಯಗಳ ಪ್ರಮಾಣವನ್ನು ಕಡಿತ ಮಾಡಬಾರದು. ಕುಟುಂಬಗಳ ಅಗತ್ಯಕ್ಕನುಗುಣವಾಗಿ ಸಮರ್ಪಕ ಪ್ರಮಾಣದಲ್ಲಿ ಪಡಿತರವನ್ನು ಒದಗಿಸಬೇಕು. ಅಂಗವಿಕಲರ, ವಿಧವೆಯರ, ವಯೋವೃದ್ಧರ ಮಾಸಿಕ ಪಿಂಚಣಿಯನ್ನು ಕೂಡಲೇ ಬಿಡುಗಡೆ ಮಾಡಿ ತಡ ಮಾಡದೆ ಪಾವತಿಸಲು ವ್ಯವಸ್ಥೆ ಮಾಡಬೇಕು. ರೈಲು ಓಡಾಟವನ್ನು ಸಹಜ ಸ್ಥಿತಿಗೆ ಮರಳಿಸಿ ಬಡವರ ಓಡಾಟಕ್ಕೆ ಅನುಕೂಲವಾಗುವಂತೆ ಪ್ಯಾಸೆಂಜರ್ ರೈಲನ್ನು ಕೂಡಲೇ ಪುನರಾರಂಭಿಸಬೇಕು. ರಾಜ್ಯದ ಪ್ರವಾಹ ಸಂತ್ರಸ್ತರಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಾಜ್ಯದ ವಸತಿ ಹೀನರಿಗೆ ಪುನರ್ವಸತಿ ಕಲ್ಪಿಸಲು ಸೂಕ್ತ ನೀತಿಯನ್ನು ರೂಪಿಸಬೇಕು. ಕೋವಿಡ್ ಮುಂಚೂಣಿ ಯೋಧರು ಎಂದು ಕರೆಯಲ್ಪಟ್ಟ ಆಶಾ ಕಾರ್ಯಕರ್ತೆಯರು, ಅಂಗನವಾಡಿ, ಬಿಸಿಯೂಟ ಸ್ಕೀಮ್ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಕಾರ್ಪೊರೇಟ್ ಕಂಪನಿಗಳನ್ನು ಉದ್ಧಾರ ಮಾಡುವ, ರೈತರನ್ನು ಬೀದಿಗೆ ತಳ್ಳುವ ಮೂರು ಕೃಷಿ ಕಾಯ್ದೆಗಳನ್ನು ಹಾಗೂ ವಿದ್ಯುತ್ ಶಕ್ತಿ ಕಾಯ್ದೆಗಳನ್ನು ಹಿಂಪಡೆಯಬೇಕು ಮತ್ತು ರಾಜ್ಯದಲ್ಲಿ ಅನುಷ್ಠಾನಗೊಳಿಸಬಾರದು. ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುತ್ತಿರುವ ಕಾರ್ಮಿಕ ಸಂಹಿತೆಗಳ ಜಾರಿಯನ್ನು ಕೈ ಬಿಡಬೇಕು ಹಾಗೂ ಈಗಾಗಲೇ ಅನುಷ್ಠಾನದಲ್ಲಿರುವ ಕಾರ್ಮಿಕ ಕಾಯ್ದೆಗಳನ್ನು ಎಂದಿನಂತೆ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಮಂಜುನಾಥ್ ಕೈದಾಳೆ, ಜಿಲ್ಲಾ ಉಪಾಧ್ಯಕ್ಷ ತಿಪ್ಪೇಸ್ವಾಮಿ ಅಣಬೇರು, ಜಿಲ್ಲಾ ಕಾರ್ಯದರ್ಶಿ ಸ್ವಾಮಿ ನಿಂಗಪ್ಪ, ಶಿವಾಜಿರಾವ್ ಢಗೆ, ಸಂಘಟನೆಯ ಕಾರ್ಮಿಕ ನಾಯಕರುಗಳಾದ ಮಂಜುಳಮ್ಮ, ಹನುಮಂತಪ್ಪ, ರಾಮಣ್ಣ, ಮಹೇಶ್, ಸುಮಾ, ಯತೀಶ್, ರಾಮೇಶ್ವರಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

### ನಗರದಲ್ಲಿ ಬ್ಯಾಂಕ್ ಉದ್ಯೋಗಿಗಳ ಮುಷ್ಕರ ಆರಂಭ

# ಬ್ಯಾಂಕ್ ಖಾಸಗೀಕರಣ ದೇಶದ ಹಿತಾಸಕ್ತಿಗೆ ಮಾರಕ




ದಾವಣಗೆರೆ, ಮಾ.15- ಬ್ಯಾಂಕ್ ಖಾಸಗೀಕರಣ ದೇಶದ ಹಿತಾಸಕ್ತಿಗೆ ಮಾರಕವಾಗಿದ್ದು, ಈ ಕೂಡಲೇ ಖಾಸಗೀಕರಣ ಪ್ರಕ್ರಿಯೆ ನಿಲ್ಲಿಸಬೇಕು. ರಾಷ್ಟ್ರೀಕೃತ ಬ್ಯಾಂಕುಗಳ ಬಲವರ್ಧನೆಗೆ ಮುಂದಾಗಬೇಕು ಎಂದು ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ರಾಘವೇಂದ್ರ ನಾಯರಿ ಒತ್ತಾಯಿಸಿದರು.

ದಾವಣಗೆರೆ ಮಂಡಿಪೇಟೆಯ ಎಸ್‌ಬಿಐ ಮುಂಭಾಗ ಬ್ಯಾಂಕ್ ಕಾರ್ಮಿಕ ಸಂಘಟನೆಗಳ ಸಂಯುಕ್ತ ವೇದಿಕೆ ಜಿಲ್ಲಾ ಘಟಕದ ವತಿಯಿಂದ ನಡೆದ ಮತ ಪ್ರದರ್ಶನ ಸಂದರ್ಭದಲ್ಲಿ ಅವರು ಮಾತನಾಡಿದರು.

ಇಂದು ದೇಶದಾದ್ಯಂತ 90 ಸಾವಿರ ಬ್ಯಾಂಕ್ ಶಾಖೆಗಳು ಸಂಪೂರ್ಣ ಬಂದ್ ಆಗಿದ್ದು, 10 ಲಕ್ಷ ಬ್ಯಾಂಕ್ ಉದ್ಯೋಗಿಗಳು ಮುಷ್ಕರದಲ್ಲಿ ಭಾಗಿಯಾಗಿದ್ದಾರೆ ಎಂದರು.

ಬ್ಯಾಂಕ್ ಖಾಸಗೀಕರಣ ದೇಶದ ಹಿತಾಸಕ್ತಿಗೆ ಮಾರಕವಾಗಿದ್ದು, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತಂದು ಉದ್ಯೋಗ ಭದ್ರತೆಗೆ ಧಕ್ಕೆ ತರುವುದು ಖಂಡನೀಯ ಎಂದು ಹೇಳಿದರು.

ದೇಶದ ಅರ್ಥ ವ್ಯವಸ್ಥೆಯ ಜೀವನಾಡಿಗಳಾದ ಸಾರ್ವಜನಿಕ ವಲಯದ ಬ್ಯಾಂಕುಗಳು ಸರ್ಕಾರದ ಅಧೀನದಲ್ಲಿಯೇ ನಡೆಯಬೇಕೇ ಹೊರತು ಖಾಸಗಿ ಬಂಡವಾಳ ಶಾಹಿಗಳ ಮೂಲಕ ಅಲ್ಲ ಎಂದರು.

ಜನಸಾಮಾನ್ಯರ 147 ಲಕ್ಷ ಕೋಟಿ ರೂ. ಠೇವಣಿ ಹಣ ಸಾರ್ವಜನಿಕ ಬ್ಯಾಂಕುಗಳಲ್ಲಿದೆ. ಇದನ್ನು ರಕ್ಷಣೆ ಮಾಡಬೇಕೇ? ಅಥವಾ ಬ್ಯಾಂಕುಗಳನ್ನು ಖಾಸಗಿ ವ್ಯಕ್ತಿಗಳಿಗೊಪ್ಪಿಸಿ ಲೂಟಿ ಮಾಡಲು ಬಿಡಬೇಕೇ? ಎಂದು ಪ್ರಶ್ನಿಸಿದರು.

1969 ರ ಬ್ಯಾಂಕ್ ರಾಷ್ಟ್ರೀಕರಣದ ಪೂರ್ವದಲ್ಲಿ 550 ಖಾಸಗಿ ಬ್ಯಾಂಕುಗಳು ಹಾಗೂ ನಂತರದಲ್ಲಿ 38 ಖಾಸಗಿ ಬ್ಯಾಂಕುಗಳು ಮುಳುಗಡೆಯಾಗಿವೆ.

ಆದರೆ, ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳ ಅಸ್ತಿತ್ವಕ್ಕೆ ಧಕ್ಕೆಯಾಗಿಲ್ಲ. ಸಾರ್ವಜನಿಕ ಬ್ಯಾಂಕುಗಳು ದೇಶದ ಆಸ್ತಿ. ಇವನ್ನು ರಕ್ಷಿಸಬೇಕು, ಬೆಳೆಸಬೇಕು ಎಂದು ಕಳಕಳಿ ವ್ಯಕ್ತಪಡಿಸಿದರು.

ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ರಾಷ್ಟ್ರೀಕರಣ ನೀತಿ ಕೈಬಿಟ್ಟು ಖಾಸಗೀಕರಣ ಮಂತ್ರ ಜಪಿಸುತ್ತಿದ್ದು, 1969 ರ ಬ್ಯಾಂಕ್ ರಾಷ್ಟ್ರೀಕರಣದ ಪೂರ್ವದಲ್ಲಿ ಬ್ಯಾಂಕುಗಳ ಸ್ಥಿತಿಗತಿಗಳು ಹೇಗಿದ್ದವು ಮತ್ತು ಇಂದು ಬ್ಯಾಂಕುಗಳ ಸ್ಥಿತಿ ಹೇಗಿವೆ ಎಂಬುದನ್ನು ಸರ್ಕಾರ ತುಲನೆ ಮಾಡಿದರೆ ಪರಿಸ್ಥಿತಿ ಅರಿವಾಗಲಿದೆ ಎಂದರು.

ನಿರುದ್ಯೋಗ ಮತ್ತು ಬಡತನ ನಿವಾರಣೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿವೆ.

ಬ್ಯಾಂಕಿಂಗ್ ಸೌಲಭ್ಯವು ದೇಶದ ಕಟ್ಟಕಡೆಯ ವ್ಯಕ್ತಿಗೂ ಸಿಗಬೇಕು. ರಾಷ್ಟ್ರೀಕೃತ ಬ್ಯಾಂಕಿಂಗ್ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಿ ಬಲಗೊಳ್ಳಬೇಕಾಗಿದೆ ಎಂದು ಹೇಳಿದರು.

ಸಂಘಟನೆಯ ಪ್ರಮುಖರಾದ ಕೆ.ಎನ್. ಗಿರಿರಾಜ್, ಕೆ. ವಿಶ್ವನಾಥ ಬಿಲ್ಲವ, ಬಿ. ಆನಂದಮೂರ್ತಿ, ಎಂ.ಎಸ್. ವಾಗೀಶ್, ಎಸ್. ನಾಗರಾಜ್ ಮತ್ತಿತರರು ಬ್ಯಾಂಕ್ ವಿರೋಧಿ ನೀತಿ ಖಂಡಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಹೆಚ್.ಜಿ. ಸುರೇಶ್, ಹೆಚ್.ಎಸ್. ತಿಪ್ಪೇಸ್ವಾಮಿ, ಕೆ. ಶಶಿಶೇಖರ್, ಎಂ.ಐ. ಕಿರಣಕುಮಾರ್, ಎಂ.ಎಸ್. ವಾಗೀಶ್, ಎನ್. ರಾಮಮೂರ್ತಿ, ಪಿ.ಆರ್. ಪುರುಷೋತ್ತಮ, ಎಸ್. ಪ್ರಶಾಂತ್, ಅನಿಲ್‌ಕುಮಾರ್, ಕಾಡಜ್ಜಿ ವೀರಪ್ಪ, ಕೆ. ರವಿಶಂಕರ್, ನಾಗವೇಣಿ ನರೇಂದ್ರ ಕುಮಾರ್, ಅಜಯ್‌ಕುಮಾರ್, ಸುರೇಶ್ ಚೌವ್ಹಾಣ್, ರಮೇಶ್, ಶಿವಮೂರ್ತಿ ಪೂಜಾರ್, ಎಂ.ಎಂ. ಸಿದ್ದವೀರಯ್ಯಸ್ವಾಮಿ, ಡಿ.ಎ. ಸಾಕಮ್ಮ ಶ್ವೇತಾ ಬಿ.ಎನ್., ನಿತ್ಯಾನಂದ ಡೊಂಗ್ರೆ, ರಾಮಕೃಷ್ಣ, ದುರುಗಪ್ಪ ಸಿ, ಸಿ.ಹೆಚ್.ಎಂ. ದೀಪಾ, ಎಸ್. ಪ್ರಶಾಂತ್, ಸುರೇಶ್ ಜೋಳದಾಳ್, ಅಬ್ಬಾರ್ ಅಹಮದ್, ದರ್ಶನ್, ಸಿದ್ದಲಿಂಗಸ್ವಾಮಿ, ಕೆ.ಹೆಚ್. ದಪ್ಪೇರ್, ಟಿ. ಸುಭಾಷ್ಚಂದ್ರ, ನಾಗೇಶ್ವರಿ ಆರ್. ನಾಯರಿ, ವಿರೂಪಾಕ್ಷಯ್ಯ, ಮೊಹಮ್ಮದ್ ರಫೀ, ಸುನೀತ, ವಿ. ನಂಜುಂಡೇಶ್ವರ, ಅಜಿತ್‌ಕುಮಾರ್ ನ್ಯಾಮತಿ, ಹೆಚ್. ಸುಶೀಲಮ್ಮ, ಜಿ.ಬಿ. ಶಿವಕುಮಾರ್, ಜೆ.ಓ. ಮಹೇಶ್ವರಪ್ಪ, ಗುರುರಾಜ್ ಭಾಗವತ್ ಮತ್ತಿತರರು ಪಾಲ್ಗೊಂಡಿದ್ದರು.

## ವಿಶ್ವ ಗ್ರಾಹಕರ ದಿನಾಚರಣೆ ಇಂದು

ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಹಾಗೂ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ ವಿಶ್ವ ಗ್ರಾಹಕರ ದಿನಾಚರಣೆಯನ್ನು ಇಂದು ಬೆಳಗ್ಗೆ 10.30ಕ್ಕೆ ನಗರದ ಆರ್.ಎಲ್ ಕಾನೂನು ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಗೋಖಲೆ ಘಾಳಪ್ಪ ನೆರವೇರಿಸುವರು. ಡಿಸಿ ಮಹಾಂತೇಶ್ ಬೀಳಗಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಗ್ರಾಹಕರ ವ್ಯಾಜ್ಯ ಗಳ ಪರಿಹಾರ ಆಯೋಗದ ಸದಸ್ಯರಾದ ಜ್ಯೋತಿ ರಾಧೇಶ್ ಜಂಬಿಗಿ ಮತ್ತು ಕೆ.ಎನ್. ಶಿವಕುಮಾರ್ ಹಾಗೂ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಅಧ್ಯಕ್ಷೆ ಹೆಚ್.ಅನಿತಾ ಪಾಲ್ಗೊಳ್ಳುವರು ಹಾಗೂ ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಎಂ. ಸೋಮಶೇಖರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಸಂಚಾಲಕ ಪಿ. ಅಂಜಿನಪ್ಪ ಉಪನ್ಯಾಸ ನೀಡುವರು ಎಂದು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ ತಿಳಿಸಿದ್ದಾರೆ.

### ಅಕ್ಷತೆ ಕಾಳು

ನಿಲ್ಲುತಿರಲಿಲ್ಲ ಮದುವೆ ಮನೇಲಿ  
ವರನ ತಲೆಯ ಮೇಲೆ  
ಅಕ್ಷತೆಯ ಕಾಳು.  
ಯಾಕೆಂದರೆ ಅವನದ್ದು  
ಸಂಪೂರ್ಣ ಬೋಳು.!

- ಬಸವನಗೌಡ ಹೆಬ್ಬಳಗೆರೆ.

## ನಗರದಲ್ಲಿಂದು ಕರುಣಾ ಟ್ರಸ್ಟ್‌ನಿಂದ ಮಹಿಳಾ ದಿನಾಚರಣೆ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಆಶ್ರಯದಲ್ಲಿ ಇಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಬಡ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ 5 ತಳ್ಳುವ ತರಕಾರಿ ಗಾಡಿಗಳು ಮತ್ತು ತಾಡಪಲ್‌ಗಳನ್ನು ವಿತರಿಸುವ ಕಾರ್ಯಕ್ರಮ ಸಂಜೆ 5 ರಿಂದ 6 ರವರೆಗೆ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಬಾ.ಮ. ಬಸವರಾಜಯ್ಯ, ಶ್ರೀಮತಿ ಪಲ್ಲವಿ ಪಾಟೀಲ್, ಶ್ರೀಮತಿ ಶೈಲಜಾ ತಿಪ್ಪೇಸ್ವಾಮಿ, ಅಧ್ಯಕ್ಷರಾಗಿ ಸಿ.ಜಿ. ದಿನೇಶ್ ಭಾಗವಹಿಸಲಿದ್ದಾರೆ. ಡಾ. ಬಿ.ಎಂ. ವಿಶ್ವನಾಥ್, ಎಂ. ಶಿವಪ್ಪ, ಎಂ.ಜಿ. ಈಶ್ವರಪ್ಪ, ವಾಮದೇವಪ್ಪ, ಮಂಜುಳಾ ಬಸವಲಿಂಗಪ್ಪ, ಡಾ. ಮಲ್ಲಿಕಾರ್ಜುನ್, ಬಸವರಾಜ್ ಒಡೆಯರ್, ಶಿವಕೆರೆ ಬಸವಲಿಂಗಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

### ರಾಜ್ಯ - ರಾಷ್ಟ್ರೀಯ ವಾರ್ತೆ

## ಅಭಿವೃದ್ಧಿ ವಿರೋಧಿ ಬಜೆಟ್ : ಸಿದ್ದು

ಬೆಂಗಳೂರು, ಮಾ. 15 - ಪ್ರಸಕ್ತ ಸಾಲಿನ ಬಜೆಟ್ ರಾಜ್ಯದ ಇತಿಹಾಸ ಕಂಡರಿಯದಂತಹ ಅಭಿವೃದ್ಧಿ ವಿರೋಧಿ ಬಜೆಟ್ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಟೀಕಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅಭಿವೃದ್ಧಿಗೆ ಹಣವೇ ಇಲ್ಲದ ಮೇಲೆ ಅಭಿವೃದ್ಧಿ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಈ ಬಾರಿಯ ಬಜೆಟ್ ಕೊರತೆ ಮುಂಗಡ ಪತ್ರವಾಗಿದ್ದು, ಸಾಲದ ಹೊರೆಯಿಂದ ಸರ್ಕಾರ ಮಗುಚಿ ಬಿದ್ದಿದೆ ಎಂದು ಟೀಕಿಸಿದರು.

ಸರ್ಕಾರದ ಆರ್ಥಿಕ ಪರಿಸ್ಥಿತಿ ನೋಡಿದರೆ ಮುಂದಿನ 3 ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳಿರಲಿ, ವಿಧವೆಯರು, ವೃದ್ಧರು, ಅಂಗವಿಕಲರಿಗೆ ಮಾಸಾಶನ ಕೊಡಲೂ ಸರ್ಕಾರದ ಬಳಿ ಹಣ ಇರುವುದಿಲ್ಲ ಎಂದರು.

2021-2022 ನೇ ಸಾಲಿನ ಬಜೆಟ್ ಮಂಡಿಸುವಾಗ 15,000 ಕೋಟಿ ರೂ. ಕೊರತೆ ಆಗುತ್ತದೆ ಎಂದಿದ್ದೀರಿ, ಇತಿಹಾಸದಲ್ಲಿ ಹಿಂದೆಂದೂ ಈ ಗಾತ್ರದ ಕೊರತೆ ಬಜೆಟ್ ಕಂಡಿರಲಿಲ್ಲ ಎಂದರು.

2020-21 ನೇ ಸಾಲಿನಲ್ಲಿ ಈಗಾಗಲೇ 70,000 ಕೋಟಿ ರೂ. ಸಾಲ ಪಡೆದಿದ್ದೀರಿ, ಫೆಬ್ರವರಿ, ಮಾರ್ಚ್ ತಿಂಗಳು ಸೇರಿದರೆ ಸಾಲದ ಪ್ರಮಾಣ ಮತ್ತಷ್ಟು ಹೆಚ್ಚಾಗುತ್ತದೆ.

ಇನ್ನು 2021-22 ನೇ ಸಾಲಿನಲ್ಲಿ 71,000 ಸಾವಿರ ಕೋಟಿ ರೂ. ಸಾಲ ಪಡೆಯುವುದಾಗಿ ಹೇಳಿದ್ದೀರಿ, ಸಾಲ ಪ್ರಮಾಣ ಒಂದೇ ಸಮನೆ ಏರುಗತಿಯಲ್ಲಿದೆ.

ಸರ್ಕಾರ ಅನಗತ್ಯ ಇಲಾಖೆಗಳನ್ನು ವಿಲೀನಗೊಳಿಸಿ ಹೆಚ್ಚುವರಿ ನೌಕರರನ್ನು ಕಿತ್ತು ಹಾಕಿದೆ ಎಂದು ಅವರು ಟೀಕಿಸಿದರು.

ಮಧ್ಯೆ ಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಜೆಟ್‌ನಲ್ಲಿ ಘೋಷಿಸಿದ ಯಾವ ಯೋಜನೆಗಳನ್ನೂ ಕಡಿತ ಮಾಡುವುದಿಲ್ಲ ಎಂದು ಭರವಸೆ ನೀಡಿದರು.

## ವೈದ್ಯಕೀಯ ಸಚಿವರಿಗೆ ಪ್ರಶ್ನೆ ಕೇಳುವುದಿಲ್ಲ ಎಂದ ಕಾಂಗ್ರೆಸ್ ಶಾಸಕ

ಬೆಂಗಳೂರು, ಮಾ. 15 - ವೈದ್ಯಕೀಯ ಶಿಕ್ಷಣ ಸಚಿವರಿಗೆ ಪ್ರಶ್ನೆ ಕೇಳುವುದಿಲ್ಲ ಎಂದು ಕಾಂಗ್ರೆಸ್‌ನ ಎಂ.ನಾರಾಯಣಸ್ವಾಮಿ ನೀಡಿದ ಹೇಳಿಕೆ ವಿಧಾನಪರಿಷತ್‌ನಲ್ಲಿಂದು ಕೋಲಾಹಲಕ್ಕೆ ಕಾರಣವಾಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆ ಚರ್ಚೆಗೆ ಬಂದಿತ್ತು.

ತಮ್ಮ ಸರತಿ ಬಂದಾಗ ನಾರಾಯಣಸ್ವಾಮಿ, ಸಿ.ಡಿ. ಪ್ರಕರಣದಲ್ಲಿ 6 ಸಚಿವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ, ಅಂತಹವರಿಗೆ ಸದನದಲ್ಲಿ ಪ್ರಶ್ನೆ ಕೇಳಬಾರದು ಎಂಬುದಾಗಿ ಪಕ್ಷ ಕಾಂಗ್ರೆಸ್ ನಿರ್ಧರಿಸಿದೆ ಎಂದರು. ಇದಕ್ಕೆ ಸಚಿವರಾದ ಡಾ.ಸುಧಾಕರ್, ನಾರಾಯಣಗೌಡ, ಬಿ.ಸಿ.ಪಾಟೀಲ್ ತೀವ್ರವಾಗಿ ವಿರೋಧಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಪ್ರಶ್ನೆ ಕೇಳುವುದು ಬಿಡುವುದು ಸದಸ್ಯರ ವಿವೇಚನೆಗೆ ಬಿಟ್ಟ ವಿಷಯ, ಅನಗತ್ಯ ವಿವರಣೆಗಳನ್ನು ಕಡತದಿಂದ ತೆಗೆದು ಹಾಕಲಾಗುವುದು ಎಂದರು.

## ಮೀಸಲಾತಿ ಹೋರಾಟದ ಹಿಂದೆ ಸಂಘ ಪರಿವಾರದ ಕೈವಾಡ : ಹರಿಪ್ರಸಾದ್

ಬೆಂಗಳೂರು, ಮಾ. 15 - ವಿವಿಧ ಸಮುದಾಯಗಳ ಮೀಸಲಾತಿ ಹೋರಾಟದಲ್ಲಿ ಸಂಘ ಪರಿವಾರದ ಕೈವಾಡವಿದೆ ಎಂದು ಕಾಂಗ್ರೆಸ್‌ನ ಸದಸ್ಯ ಬಿ.ಕೆ.ಹರಿಪ್ರಸಾದ್ ವಿಧಾನ ಪರಿಷತ್‌ನಲ್ಲಿಂದು ಆರೋಪಿಸಿದ್ದಾರೆ.

2021-22ನೇ ಸಾಲಿನ ಬಜೆಟ್ ಮೇಲೆ ಚರ್ಚೆ ಆರಂಭಿಸಿದ ಅವರು, ವಿವಿಧ ಸಮುದಾಯಗಳಿಗೆ ಬಜೆಟ್‌ನಲ್ಲಿ ನೀಡಲಾಗಿರುವ ಅನುದಾನಗಳ ಬಗ್ಗೆ ಪ್ರಸ್ತಾಪಿಸಿ ಸರ್ಕಾರ ಯಾವ ಸಮುದಾಯಗಳನ್ನು ಓಲೈಕೆ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ ಎಂದರು.

2015ರ ಚುನಾವಣೆಯಲ್ಲಿ ಆರ್‌ಎಸ್‌ಎಸ್‌ನ ಮುಖಂಡ ರೊಬ್ಬರು ಮೀಸಲಾತಿ ರದ್ದುಪಡಿಸಬೇಕೆಂದು ಹೇಳಿಕೆ ನೀಡಿದ್ದರು, ಇದೇ ರೀತಿ ಹೇಳಿಕೆಗಳು ಹೊರಬಂದಿವೆ ಎಂದು ಅವರು ಆರೋಪಿಸಿದಾಗ, ಸಭಾನಾಯಕ ಕೋಟಾ ಶ್ರೀನಿವಾಸ್ ಪೂಜಾರಿ, ಬಿಜೆಪಿ ಸದಸ್ಯ ರವಿಕುಮಾರ್ ತೀವ್ರ ವಿರೋಧ ವ್ಯಕ್ತಪಡಿಸಿ, ಸಂಘ ಪರಿವಾರದ ಯಾವ ನಾಯಕರೂ ಈ ರೀತಿ ಹೇಳಿಕೆ ನೀಡಿಲ್ಲ, ತಪ್ಪು ಮಾಹಿತಿ ನೀಡಬೇಡಿ ಎಂದರು. ಈ ಹಂತದಲ್ಲಿ ವಾದ-ಪ್ರತಿವಾದ ನಡೆದು ಸದನದಲ್ಲಿ ಗದ್ದಲ ಉಂಟಾಯಿತು.

## ಅಂಟಿಲಿಯಾ ಬೆದರಿಕೆ : ಪೊಲೀಸ್ ಇನ್ಸ್‌ಪೆಕ್ಟರ್ ವಾಜೆ ಅಮಾನತ್ತು

ಮುಂಬೈ, ಮಾ. 15 – ಉದ್ಯಮಿ ಮುಕೇಶ್ ಅಂಬಾನಿ ಅವರ ಅಂಟಿಲಿಯಾ ನಿವಾಸಕ್ಕೆ ಬಾಂಬ್ ಬೆದರಿಕೆ ಪ್ರಕರಣದಲ್ಲಿ ಎನ್.ಐ.ಎ. ಬಂಧನಕ್ಕೆ ಒಳಗಾಗಿರುವ ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್ ಸಚಿನ್ ವಾಜೆ ಅವರನ್ನು ಮುಂಬೈ ಪೊಲೀಸರು ಅಮಾನತ್ತುಗೊಳಿಸಿದ್ದಾರೆ.

ಎ.ಪಿ.ಐ. ಸಚಿನ್ ವಾಜೆ ಅವರನ್ನು ಅಮಾನತ್ತುಗೊಳಿಸಿರುವ ವಿಷಯವನ್ನು ಡಿ.ಸಿ.ಪಿ. ಎಸ್. ಚೈತನ್ಯ ಪತ್ರಕರ್ತರಿಗೆ ತಿಳಿಸಿದ್ದಾರೆ. ಶನಿವಾರ ರಾತ್ರಿ ಅವರನ್ನು ಎನ್.ಐ.ಎ. ಬಂಧಿಸಿತ್ತು.

ಎನ್‌ಕೌಂಟರ್ ಪರಿಣಿತ ಎಂದು ಹೇಳಲಾಗುವ ವಾಜೆ, 63 ಅಪರಾಧಿಗಳನ್ನು ಹೊಡೆದುರುಳಿಸಿದ್ದಾರೆ ಎನ್ನಲಾಗಿದೆ. ಆದರೆ, ಥಾಣೆಯ ಉದ್ಯಮಿ ಮನ್‌ಸುಖ್ ಹಿರನ್ ಅವರ ಬಳಿ ಇದ್ದ ಸ್ಕಾರ್ಪಿಯೋ, ಅಂಟಿಲಿಯಾ ಬಳಿ ಸ್ಫೋಟಕಗಳೊಂದಿಗೆ ಪತ್ತೆಯಾದ ಪ್ರಕರಣದಲ್ಲಿ ವಾಜೆ ವಿರುದ್ಧ ಆರೋಪಗಳು ಕೇಳಿ ಬಂದಿವೆ. ಪ್ರಕರಣ ಬೆಳಕಿಗೆ ಬಂದ ನಂತರ ಹಿರನ್ ಶಂಕಾಸ್ಪದವಾಗಿ ಸಾವನ್ನಪ್ಪಿದ್ದರು.

## ನಾಳೆ ಸಿಎಂ ಜೊತೆ ಪ್ರಧಾನಿ ಸಂವಾದ

ನವದೆಹಲಿ, ಮಾ. 15 – ದೇಶದ ಹಲವೆಡೆ ಕೊರೊನಾ ಸೋಂಕು ತೀವ್ರವಾಗುತ್ತಿರುವ ನಡುವೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಆನ್‌ಲೈನ್ ಮೂಲಕ ಸಂವಾದ ನಡೆಸಲಿದ್ದಾರೆ.

ಈ ಹಿಂದೆ ಜನವರಿಯಲ್ಲಿ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡುವುದಕ್ಕೆ ಮುಂಚೆ ಪ್ರಧಾನಿ ಮುಖ್ಯಮಂತ್ರಿಗಳ ಜೊತೆ ಸಂವಾದ ನಡೆಸಿದ್ದರು. ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಸೇರಿದಂತೆ ಐದು ರಾಜ್ಯಗಳಲ್ಲಿ ಸೋಂಕಿನ ಪ್ರಮಾಣ ದಿನೇ ದಿನೇ ಹೆಚ್ಚಾಗುತ್ತಿದೆ. ಸೋಂಕಿನ ಬಗ್ಗೆ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳದಿರುವುದೇ ಕೊರೊನಾ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಸೋಮವಾರ ಹೇಳಿದ್ದಾರೆ.

## ಟಿ-ಶರ್ಟ್ ಧರಿಸಿ ವಿಧಾನಸಭೆಗೆ : ಶಾಸಕನ ಹೊರ ದೂಡಿದ ಸ್ಪೀಕರ್

ಗಾಂಧಿನಗರ, ಮಾ. 15 – ವಿಧಾನಸಭೆಗೆ ಟಿ-ಶರ್ಟ್ ಧರಿಸಿ ಬಂದಿದ್ದ ಗುಜರಾತ್ ಕಾಂಗ್ರೆಸ್ ಶಾಸಕ ವಿಮಲ್ ಚುಡಾಸಮ ಅವರನ್ನು ವಿಧಾನ ಸಭಾಧ್ಯಕ್ಷ ರಾಜೇಂದ್ರ ತ್ರಿವೇದಿ ಸೂಚನೆಯಂತೆ ಹೊರ ಹಾಕಲಾಗಿದೆ.

ಶಾಸಕರು ಸದನದ ಘನತೆ ಕಾಯ್ದುಕೊಳ್ಳಬೇಕು. ಸದನದಲ್ಲಿ ಟಿ - ಶರ್ಟ್ ಧರಿಸಬಾರದು ಎಂದು ವಿಧಾನಸಭಾಧ್ಯಕ್ಷರು ಹೇಳಿದರು. ಆದರೆ, ಸದಸ್ಯರು ನಿರ್ದಿಷ್ಟ ಉಡುಗೆ ಧರಿಸಬೇಕು ಎಂಬ ಯಾವುದೇ ನಿಯಮವಿಲ್ಲ ಎಂದು ಪ್ರತಿಪಕ್ಷವಾದ ಕಾಂಗ್ರೆಸ್ ವಿರೋಧಿಸಿತು. ವಾರದ ಹಿಂದೆ ಚುಡಾಸಮ ಟಿ- ಶರ್ಟ್ ಧರಿಸಿ ಸದನಕ್ಕೆ ಬಂದಿದ್ದರು. ಆಗ ಅವರಿಗೆ ಮತ್ತೆ ಟಿ-ಶರ್ಟ್ ಧರಿಸಿ ಸದನಕ್ಕೆ ಬರಬಾರದು ಎಂದು ತಿಳಿಸಲಾಗಿತ್ತು.

## ಎನ್.ಐ.ಎ. ದಾಳಿ : ಮೂವರು ಬಂಧನ

ನವದೆಹಲಿ, ಮಾ. 15 – ಐಸಿಸ್ ಉಗ್ರವಾದಿ ಸಿದ್ಧಾಂತ ಪ್ರತಿಪಾದಿಸುತ್ತಿದ್ದ ಸಂಘಟನೆಯೊಂದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಕೇರಳ, ಕರ್ನಾಟಕ ಹಾಗೂ ದೆಹಲಿಗಳ 11 ಕಡೆ ದಾಳಿ ನಡೆಸಿ ಮೂವರನ್ನು ಬಂಧಿಸಿದೆ.

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್) 98440 63409, 97315 63409

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ, ರಶ್ಮಿ ಹಾಸ್ಟೆಲ್ ಸ್ಕೂಲ್ ಸುತ್ತ-ಮುತ್ತ 30x40 North, 30x50 East, 30x38 East, 43x35 East, 30x70 West
ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x56 ಉತ್ತರ ಅಕ್ಕ-ಪಕ್ಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ, ಬಸವೇಶ್ವರ ಬಡಾವಣೆಯಲ್ಲಿ 30x46 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715

**ಮನೆಗಳು ಮಾರಾಟಕ್ಕಿವೆ**
1) 40x60 North 3 ಬೆಡ್ ರೂಮ್ ಕುವೆಂಪು ಬಡಾವಣೆಯಲ್ಲಿ. 2) 40x60 west, 2 ಬೆಡ್‌ರೂಂ ಹೊಸಮನೆ ಸಿದ್ದವೀರಪ್ಪ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಮನೆಗಳು ಬಾಡಿಗೆಗೆ/ಲೀಜ್‌ಗೆ ಇವೆ**
ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ, ಸಿದ್ದವೀರಪ್ಪ ಬಡಾವಣೆಯಲ್ಲಿ, ಬಸವೇಶ್ವರ ಬಡಾವಣೆಯಲ್ಲಿ. ಅರ್ಧ ಪರ್ಸೆಂಟ್ ಕಮೀಷನ್ ಆಧಾರದ ಮೇಲೆ.
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715

**ಸೈಟುಗಳು ಖರೀದಿಗೆ ಬೇಕಾಗಿವೆ**
1) ನೆಲಮಂಗಲದ ತರಳಬಾಳು ನಗರದಲ್ಲಿ 2) ಬೆಂಗಳೂರು ಮತ್ತು ಮೈಸೂರು ಹಾಗೂ ದಾವಣಗೆರೆಯಲ್ಲಿ
ಕಿರಣ್ ಬೂಸ್ನೂರ್ (ಏಜೆಂಟ್) 98440-63409, 97315-63409, 94480-63409, 08192-263409

**ಮನೆ ಮಾರಾಟಕ್ಕೆ ಇದೆ**
30×50 ಸೈಟ್‌ನಲ್ಲಿ 2 ಬೆಡ್‌ರೂಂನ ಆಧುನಿಕ ವ್ಯವಸ್ಥೆಯುಳ್ಳ, ವಾಸ್ತು ಪ್ರಕಾರ ಕಟ್ಟಿರುವ, ಪಶ್ಚಿಮ ದಿಕ್ಕಿನ ಮನೆ, ಬಾಲಾಜಿ ಬಡಾವಣೆಯಲ್ಲಿ ಮಾರಾಟಕ್ಕೆ ಇದೆ. ವಿಚಾರಿಸಿ : 98448 82366

**ಬ್ಯಾಡಗಿ ಖಾರದ ಪುಡಿ ದೊರೆಯುತ್ತದೆ**
ನಮ್ಮಲ್ಲಿ ಉತ್ತಮ ಗುಣಮಟ್ಟದ ಹಾಗೂ ಶುದ್ಧವಾದ ಬ್ಯಾಡಗಿ ಖಾರದ ಪುಡಿ ಈ ಕೆಳಗಿನ ದರದಲ್ಲಿ ದೊರೆಯುತ್ತದೆ. 110 ರೂ. 1 ಕೆ.ಜಿ., 150 ರೂ. 1 ಕೆ.ಜಿ., 200 ರೂ. 1 ಕೆ.ಜಿ., 250 ರೂ. 1 ಕೆ.ಜಿ., 300 ರೂ. 1 ಕೆ.ಜಿ., 450 ರೂ. 1 ಕೆ.ಜಿ.
ಆನಂದ ಕಾಂಪ್ಲೆಕ್ಸ್, ನಂ. 12, ಅಶೋಕ ರಸ್ತೆ, ದಾವಣಗೆರೆ. 90085 36467

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಹದಡಿ ರೋಡ್ ದಾವಣಗೆರೆ
84315 68521

**ಗೋಡೌನ್ ಬಾಡಿಗೆಗಿದೆ**
ಇಂಡಸ್ಟ್ರೀಯಲ್ ಏರಿಯಾ 2ನೇ ಕ್ರಾಸ್‌ನಲ್ಲಿ 5000 ಚದುರ ಅಡಿ ಇರುವ ಗೋಡೌನ್ ಬಾಡಿಗೆಗೆ ಇದೆ. ಸಂಪರ್ಕಿಸಿ: 99641 10777

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಜಮೀನು ಮಾರಾಟಕ್ಕಿದೆ**
ದುಗ್ಗತ್ತಿ ಸ.ನಂ 25/1 ಮತ್ತು 2, 6 ಎ, 12 ಸೆಂ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
99641 45931

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
94803 43063

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
82177 72482

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಸೋಫಾ ಮೆಸ್ ಮಾಡುತ್ತೇವೆ**
ನಮ್ಮಲ್ಲಿ ಸೋಫಾ ಮೆಸ್, ಎಲ್ಲಾ ತರಹದ ಕುಷನ್ ಸೋಫಾ, ಎಲ್ಲಾ ಬೆಡ್ ಸ್ಪಾಂಜ್, ವುಡ್ ಪಾಲಿಶ್ ಮಾಡುತ್ತೇವೆ. ರಿಪೇರಿ ಸಹ ಮಾಡುತ್ತೇವೆ.
98452 79197, 74830 88761

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
87220 14318
95352 69849

**English for Children**
1. Communication Skill
2. Spoken English Skill
3. Writing Skill
4. Grammar Skill
ELITE ACADEMY
BIET College Road,
98442 39618

**ಬೇಕಾಗಿದ್ದಾರೆ**
1) ಲ್ಯಾಬ್ ಟೆಕ್ನೀಷಿಯನ್ -1
2) ಸ್ಟಾಫ್ ನರ್ಸ್‌ಗಳು - 2
ಸಂಪರ್ಕಿಸಿ 88677 75564

**COMMERCIAL SPACE FOR RENT**
1st, 2nd and 3rd floor, New Building, LIFT Installed, Good 45ft exposure to main road. Beside Royal Enfield showroom, Hadadi Main Road, Davangere.
8660214677

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಮಲ್ಟಿಪ್ಲೆಕ್ಸ್ ಕಂಪನಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಮೈಕ್ರೋನ್ಯೂಟ್ರಿಯಂಟ್ ಕಂಪನಿಯಲ್ಲಿ 5 ವರ್ಷ ಕೆಲಸ ಮಾಡಿರುವ ಅನುಭವ ಹೊಂದಿರಬೇಕು.
ಸ್ಥಳ : ಚಳ್ಳಕೆರೆ, ಚಿತ್ರದುರ್ಗ, ಹರಿಹರ, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
99455 47626, 99457 13454, 86605 93957

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**WANTED**
Sales Marketing Excutive for Lubricants.
Address
DHANASHREE MARKETING
APMC 'E' Block, Davanagere.
94838 94420, 94484 56993

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**SWIGGY HIRING**
Delivery Executives Full Time / Part Time 4000 To 5000 Weekly Salary
CONTACT
99866 92789
95382 00008

**ಸ್ವರ ಭವಿಷ್ಯ**
ಶ್ರೀ ಕಾಳಿ ಜ್ಯೋತಿಷ್ಯ ಫಲಂ
ಪಂ. ಶಂಕರ್ ಪ್ರಸಾದ್
ನುಡಿದಂತೆ ನಡೆಯುವುದು.ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ವಿಚಾರ, ಆರೋಗ್ಯ ಸಮಸ್ಯೆ, ತಿಳಿದೋ ತಿಳಿಯದೇ ಮಾಡಿದಂತಹ ಪಾಪ ದೋಷಗಳಿಗೆ ಕೇವಲ 6 ಗಂಟೆಯಲ್ಲಿ ಪರಿಹಾರ. ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು. ಇಂದೇ ಕರೆ ಮಾಡಿ. ಮೋಡಿ ವಶೀಕರಣ ಸ್ಪೆಷಲಿಸ್ಟ್ ನಂ.1.
ಮೊ : 9591984627

**WANTED**
KANNADA & ENGLISH TYPIST,DTP OPERATOR
OPP. NEW COURT,DVG-06.
80733 00626

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**ಬೇಕಾಗಿದ್ದಾರೆ**
S.N. Enterprises Water Purifier ಆಫೀಸ್‌ನಲ್ಲಿ ಹೆಲ್ಪರ್ ಆಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (Field work) ದ್ವಿಚಕ್ರ ವಾಹನ ಇರಬೇಕು.
ಸಂಬಳ : 9000/-
7259573740

**ಬೇಕಾಗಿದ್ದಾರೆ**
ಶರಭೇಶ್ವರ ಊಟದ ಹೋಟೆಲ್ ನಲ್ಲಿ ಕೆಲಸ ಮಾಡಲು ಚುರುಕಾದ ಹುಡುಗರು ಹಾಗೂ ಕ್ಯಾಷಿಯರ್ (ಮಹಿಳೆಯರು) ಬೇಕಾಗಿದ್ದಾರೆ. ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು. ಸಂಪರ್ಕಿಸಿ
94489 80070,
78991 90070

**Home Tution**
100% Result
B.Sc B.Ed, M.Sc ಮಾಡಿರುವ ಶಿಕ್ಷಕರು ನಿಮ್ಮ ಮನೆಗೇ ಬಂದು ಪಾಠ ಮಾಡುವರು (Maths, Science & All) 4 ರಿಂದ 10ನೇ ತರಗತಿಯವರೆಗೆ
90192 68891, 89513 97381

**ಬೇಕಾಗಿದ್ದಾರೆ**
Lab Assitant
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ PUC Science
Driver
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ ಪಿಯುಸಿ
ಸೆಕ್ಯೂರಿಟಿ ಸೂಪರ್‌ವೈಸರ್–03
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
ಸೆಕ್ಯೂರಿಟಿ ಗಾರ್ಡ್–10: (M/F)
ರೂ.6000 ರಿಂದ 10000 ಸಾವಿರ
ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ.
Principal, GMHPUC
GMIT Campus, DVG
ceo.drvr@gmhpuc.ac.in
91411-58731
99722-11111

**ಬಾಡಿಗೆಗೆ**
15 ರೂಂಗಳು ವಿತ್ ಅಟ್ಯಾಚ್ಡ್ ಬಾತ್‌ರೂಂ ಮತ್ತು ಊಟದ ಹಾಲ್ ಬಾಡಿಗೆಗೆ ದೊರೆಯುತ್ತದೆ. ಪಿ.ಜಿ. ನಡೆಸುವವರಿಗೆ ಮೊದಲ ಆದ್ಯತೆ. ಸರಸ್ವತಿ ಬಡಾವಣೆ, ದಾವಣಗೆರೆ.
81055 42689

**15 ದಿನಗಳಲ್ಲಿ ಪರಿಹಾರ**
ಬಿಪಿ, ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಮನೆ ಬಾಡಿಗೆಗೆ ಇದೆ**
#109/3, ಶ್ರೀ ಬಾಲಾಜಿ ನಿಲಯ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೋಡ್, ರೈತರ ಬೀದಿ, ದಾವಣಗೆರೆ-2.
90080 93045

**ಬೇಕಾಗಿದ್ದಾರೆ**
ವೇಟ್ಟರ್, ಕ್ಲೀನರ್, ಲೇಡಿ ಕ್ಲೀನರ್, ಕಿಚನ್ ಸೂಪರ್‌ವೈಸರ್, ಬಿಲ್ಲಿಂಗ್ ಆಪರೇಟರ್ ಬೇಕಾಗಿದ್ದಾರೆ.
ಹೋಟೆಲ್ ಫುಡೀಸ್
ಚರ್ಚ್ ರೋಡ್, ತೊಗಟವೀರ ಕಲ್ಯಾಣ ಮಂಟಪದ ಹತ್ತಿರ, ದಾವಣಗೆರೆ.
98861 56688

**100% JOB**
ದಾವಣಗೆರೆ ಜಿಲ್ಲೆಯಲ್ಲಿ 24 ಹುದ್ದೆಗಳಿಗೆ ಬಂದ ದಿನವೇ ನೇರ ನೇಮಕಾತಿ. ವಿದ್ಯಾರ್ಹತೆ: SSLC, PUC, ITI, Any Degree, Accounts + Administration, Receptioni , Tele Calling + Sales Excutive, Security Gurd, Housekeeping. Salary 12K to 15K
95132 22622

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಬೇಕಾಗಿದ್ದಾರೆ**
ಪಿಯುಸಿ ಮೇಲ್ಪಟ್ಟ ಸದೃಢ ಯುವಕ ಮತ್ತು ಯುವತಿಯರು ಚಿಕಿತ್ಸಾ ಸಹಾಯಕರಾಗಿ ಕೆಲಸ ಮಾಡಲು ಬೇಕಾಗಿದ್ದಾರೆ.
ನ್ಯೂರೋಥೆರಪಿ ಕ್ಲಿನಿಕ್
ಮೋದಿ ಕಾಂಪೌಂಡ್ ಹತ್ತಿರ ಮೋದಿ ರೋಡ್, ದಾವಣಗೆರೆ.
9972600713

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 17-03-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಟ್ಯಾಲಿ ನಿಪುಣತೆ ಇರುವ ವಿವಾಹಿತ ಮಹಿಳೆ ಬೇಕಾಗಿದ್ದಾರೆ.
ಧನಶ್ರೀ ಮಾರ್ಕೆಟಿಂಗ್
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ.
94838 94420
94484 56993

## ವಿಧಾನಸೌದ ಚಲೋಗೆ ಪ್ರತಿ ತಾಲ್ಲೂಕಿನಿಂದ 500 ರೈತರು ಭಾಗಿ : ರೈತರ ಸಭೆಯಲ್ಲಿ ನಿರ್ಧಾರ



ದಾವಣಗೆರೆ, ಮಾ.15- ನಗರದ ಎಪಿಎಂಸಿ ಯಾರ್ಡ್ ನಲ್ಲಿ ಇಂದು ರೈತರ ಸಭೆ ನಡೆಸಿ, ರೈತ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ಕಾನೂನುಗಳ ವಿರುದ್ದ ದೊಡ್ಡ ಹೋರಾಟ ದೇಶದಾದ್ಯಂತ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿ ಮಾರ್ಚ್ 22ರಂದು ಸಂಯುಕ್ತ ಹೋರಾಟ ಕರ್ನಾಟಕ, ಐಕ್ಯ ಹೋರಾಟ ಕರ್ನಾಟಕ ಹಾಗೂ ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ವಿಧಾನಸೌಧ ಚಲೋಗೆ ಪ್ರತಿ ತಾಲ್ಲೂಕಿನಿಂದ 500 ಮಂದಿ ರೈತರು ಬರಲು ನಿರ್ಧರಿಸಲಾಯಿತು.

ರಾಷ್ಟ್ರೀಯ ರೈತ ನಾಯಕ ರಾಕೇಶ್ ಟಿಕಾಯತ್, ಡಾ. ದರ್ಶನ್ ಪಾಲ್ ಹಾಗೂ ಸಂಯುಕ್ತ ಹೋರಾಟ ಕರ್ನಾಟಕದ ಎಲ್ಲಾ ಸಂಘಟನೆಗಳ ಮುಖಂಡರು ಭಾಗವಹಿಸಲು ತೀರ್ಮಾನಿಸಲಾಯಿತು.

ಸಭೆಯಲ್ಲಿ ಜೆ.ಎಂ ವೀರಸಂಗಯ್ಯ, ರವಿಕುಮಾರ್ ಬಲ್ಲೂರು, ಅಮ್ಜದ್ ಪಾಶ, ಎನ್.ಡಿ. ವಸಂತಕುಮಾರ, ಕೆ.ಎಸ್. ಪ್ರಸಾದ್ ಸೇರಿದಂತೆ ಇತರರು ಇದ್ದರು.

## ಬಿ.ಇಡಿ. ಕಾಲೇಜುಗಳ ವಿರುದ್ಧ ತನಿಖೆಗೆ ಆಗ್ರಹ




ದಾವಣಗೆರೆ, ಮಾ.15- ಬಿ.ಇಡಿ ಸೀಟುಗಳನ್ನು ಮಾರಾಟ ಮಾಡುತ್ತಿರುವ ಕಾಲೇಜುಗಳ ವಿರುದ್ಧ ತನಿಖೆ ಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ದಾವಣಗೆರೆ ವಿಭಾಗದ ಕಾರ್ಯಕರ್ತರು ನಗರದಲ್ಲಿಂದು ಉಪವಿಭಾಗಾಧಿಕಾರಿ ಮುಖಾಂತರ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಯಾವ ರಾಜ್ಯ ದೇಶಕ್ಕೆ ಮಾದರಿ ಆಗಿತ್ತೋ ಆ ರಾಜ್ಯದಲ್ಲಿಂದು ಬಿ.ಇಡಿ ಸೀಟುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿರುವ ದಂಧೆ ನಡೆದಿರುವುದು ಬೇಸರದ ಸಂಗತಿ. ಬಿ.ಇಡಿ ಕೋರ್ಸ್‌ಗೆ ಡಿಮ್ಯಾಂಡ್ ಇರುವುದನ್ನು ಅರಿತ ಕೆಲವು ಬಿ.ಇಡಿ ಶಿಕ್ಷಣ ಸಂಸ್ಥೆಗಳು ಒಂದು ರೀತಿಯಲ್ಲಿ ಬಿ.ಇಡಿ ಪ್ರಮಾಣ ಪತ್ರವನ್ನು ಮಾರಾಟ ಮಾಡಿ ಅಕ್ರಮವಾಗಿ ಹಣ ಸಂಪಾದಿಸುತ್ತಿವೆ ಎಂದು ಸಂಘಟನೆಯ ಕಾರ್ಯಕರ್ತರು ಆರೋಪಿಸಿದರು.

ಬಿ.ಇಡಿ ಕೋರ್ಸ್ ಮಾಡಲು ಬಯಸುವ, ಆದರೆ ತರಗತಿಗಳಿಗೆ ಹಾಜರಾಗಲು ಇಷ್ಟವಿಲ್ಲದವರನ್ನು ಆಯ್ಕೆ ಮಾಡಿಕೊಂಡು, ಅಕ್ರಮವಾಗಿ ಪ್ರಮಾಣ ಪತ್ರ ನೀಡಲಾಗುತ್ತಿದೆ. ಈ ಅಕ್ರಮಕ್ಕಾಗಿ ಇಂತಹ ವಿದ್ಯಾರ್ಥಿಗಳಿಂದ ಶುಲ್ಕ ಮಾತ್ರವಲ್ಲದೆ, ಹೆಚ್ಚುವರಿ ಹಣ ಪಡೆದುಕೊಳ್ಳಲಾಗುತ್ತದೆ. ಇದಲ್ಲದೆ ಸರ್ಕಾರಿ ಕೋಟಾದಡಿಯಲ್ಲಿ ಸೀಟು ಪಡೆದು ಬಂದ ವಿದ್ಯಾರ್ಥಿಗಳಿಂದ ಖಾಸಗಿ ಬಿ.ಇಡಿ ಕಾಲೇಜುಗಳು ಬೇಕಾಬಿಟ್ಟಿ ದುಡ್ಡು ವಸೂಲಿ ಮಾಡುತ್ತಿರುವುದು ಖಂಡನಾರ್ಹ ಎಂದು ಆಕ್ಷೇಪಿಸಿದರು.

ಬಿ.ಇಡಿ ಪದವಿ ಪಡೆದುಕೊಳ್ಳಲು ಅಕ್ರಮ ಮಾರ್ಗ ಕಂಡುಕೊಂಡವರು ಕಾಲ ಕಾಲಕ್ಕೆ ಸಲ್ಲಿಸಬೇಕಾದ ಅಸೈನ್‌ಮೆಂಟ್‌ಗಳನ್ನು ಕೂಡ ಕಾಲೇಜಿನವರೇ ಒದಗಿಸುತ್ತಾರೆ. ಅದನ್ನೇ ನೋಡಿಕೊಂಡು ವಿದ್ಯಾರ್ಥಿಗಳು ಅಸೈನ್‌ಮೆಂಟ್ ಬರೆದುಕೊಡಬಹುದು. ಸರ್ಕಾರ ತಕ್ಷಣವೇ ಬಿ.ಇಡಿ ಕಾಲೇಜುಗಳಲ್ಲಿ ಅಕ್ರಮ ದಂಧೆಯಲ್ಲಿ ತೊಡಗಿಸಿಕೊಂಡವರ ವಿರುದ್ಧ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ನಗರ ಹೋರಾಟ ಪ್ರಮುಖ್ ಶಶಾಂಕ್ ಚವ್ಹಾಣ್, ನಗರ ಸಂಪರ್ಕ ಪ್ರಮುಖ್ ದೊಡ್ಡೇಶ್, ಎ.ಎಂ. ಕೊಟ್ರೇಶ್, ನರೇಂದ್ರ ಪವಾರ್, ಸುರೇಶ್ ಗೌಡ, ಸುಮನ್ ಗೌಡ, ಅನಂತ್ ಪಾಟೀಲ್, ಜೆ. ಹೆಚ್. ಸಿದ್ದೇಶ್ ಹಾಗೂ ಮತ್ತಿತರರಿದ್ದರು.

## ಇಂದು ರಾಯಚೋಟಿ ವೀರಭದ್ರಸ್ವಾಮಿ ರಥೋತ್ಸವ

ಆಂಧ್ರಪ್ರದೇಶ ರಾಜ್ಯದ ಕಡಪ ಜಿಲ್ಲೆಯ ರಾಯಚೋಟಿಯಲ್ಲಿ ಇಂದು ವೀರಭದ್ರೇಶ್ವರ ಸ್ವಾಮಿ ರಥೋತ್ಸವ ನಡೆಯಲಿದೆ. ಇಂದು ಬೆಳಿಗ್ಗೆ 4 ಕ್ಕೆ ಅಗ್ನಿಕುಂಡ ಪ್ರವೇಶ, ಬೆಳಿಗ್ಗೆ 11.45 ಕ್ಕೆ ವಜ್ರದ ತ್ರಿನೇತ್ರ ಧಾರಣೆ ಹಾಗೂ ಮಹಾನೈವೇದ್ಯ ನಡೆಯಲಿದ್ದು, ಸಂಜೆ 4 ಕ್ಕೆ ಶ್ರೀ ಭದ್ರಕಾಳಿ ಸಮೇತ ಶ್ರೀ ವೀರಭದ್ರಸ್ವಾಮಿ ಉತ್ಸವ ಮೂರ್ತಿಗಳೊಂದಿಗೆ ರಥೋತ್ಸವ ಜರುಗುವುದು.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಶಕ್ತಿನಗರ, ರಾಜೇಂದ್ರ ಬಡಾವಣೆ, ಜಯನಗರ ಬಿ ಬ್ಲಾಕ್, ಬನಶಂಕರಿ ದೇವಸ್ಥಾನ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5.00 ರವರೆಗೆ ವಿದ್ಯುತ್ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

### ಓದುಗರ ಪತ್ರ

## ಅಂತರ್ಜಾಲ ಮಾಧ್ಯಮಗಳಲ್ಲಿ ನನ್ನದೊಂದು ಮನವಿ..

ಮಾನ್ಯರೇ,

"ಕೊರೋನಾ ಹಾವಳಿ ಹೆಚ್ಚಾಗಿರುವುದರಿಂದ ಶಾಲಾ ಮಕ್ಕಳಿಗೆ ಬೇಸಿಗೆ ರಜೆ ನೀಡಲಾಗಿದೆ ಹಾಗೂ ಪರೀಕ್ಷೆ ಇಲ್ಲದೇ ಮುಂದಿನ ತರಗತಿಗೆ ಉತ್ತೀರ್ಣ ಮಾಡಲಾಗಿದೆ" ಎನ್ನುವ ಗಾಳಿ ಸುದ್ದಿ ಮಾಧ್ಯಮಗಳಲ್ಲಿ ಹರಿದಾಡಿ ಬಹುತೇಕ ಹೆಚ್ಚಿನ ಪೋಷಕರು, ಶಿಕ್ಷಕರು ವಿದ್ಯಾರ್ಥಿಗಳನ್ನು ಹಲವು ರೀತಿಯಲ್ಲಿ ಕಾಡಿತು.

ಮಾಧ್ಯಮಗಳೇ, ಅನಾವಶ್ಯಕ ನೈಜವಲ್ಲದ ಸುದ್ದಿಗಳನ್ನು ಬಿತ್ತರಿಸುವುದರಿಂದ ನಮಗಾಗೋ(ನಾನೋರ್ವ ಶಿಕ್ಷಕಿ) ಮಾನಸಿಕ ಹಿಂಸೆಗೆ ಪರಿಹಾರ ನೀಡುವವರು ಯಾರು??

ಕೋವಿಡ್ ಲಾಕ್ ಡೌನ್ ನಿಂದಾಗಿ ವರ್ಷ ಪೂರ್ತಿ ಶಿಕ್ಷಣದಿಂದ ದೂರ ಉಳಿದ ವಿದ್ಯಾರ್ಥಿಗಳನ್ನು ಪುನಃ ಮೊದಲಿನ ಸ್ಥಿತಿಗೆ ತರುವಲ್ಲಿ ನಾವು ಮಾಡಿದ ಶ್ರಮದ ಹಿಂದಿನ ಅರಿವು ನಿಮಗೆ ಸ್ವಲ್ಪವಾದರೂ ತಿಳಿದಿದೆಯೇ?

ಎಲ್ಲೋ ಕಳೆದುಹೋಗಿದ್ದ ನಮ್ಮ ಮಕ್ಕಳ ಕಲಿಕಾ ಲಯವನ್ನು ಮತ್ತೆ ಮರಳಿ ಗಳಿಸಿ, ಅವರಲ್ಲಿ ಕಲಿಯೋ ಆಸಕ್ತಿ ಚಿಗುರಿಸಿ, ಉತ್ತಮ ಸ್ಪಂದನೆ ಸಿಗುವ ಈ ಸಂದರ್ಭದಲ್ಲಿ ಮತ್ತೆ ರಜೆ ಅನ್ನೋ ಸುಳ್ಳು ಸುದ್ದಿಗೆ ಆ ಮಕ್ಕಳ ಮನಸ್ಥಿತಿ ಏನಾಗಬೇಕು? ಕ್ಷಣಮಾತ್ರದಲ್ಲಿ ಮನಸ್ಸು ವಿಚಲಿತವಾಗಿ ಮತ್ತೆ ಹೆಜ್ಜೆ ಹಿಂದಿಟ್ಟು ಕಲಿಕೆಯಿಂದ ವಿಮುಖರಾದರೆ ನಾವು ಶಿಕ್ಷಕರು ಇದುವರೆಗೂ ಮಾಡಿದ ಪ್ರಯತ್ನ ಬೋರ್ಗಲ್ಲ ಮೇಲೆ ಮಳೆ ಸುರಿದಂತಾಗುತ್ತದೆ. ಇದರಿಂದ ನಮಗಾಗೋ ಮಾನಸಿಕ ಒತ್ತಡ, ಮಕ್ಕಳಿಗಾಗೋ ಗೊಂದಲ ಇವುಗಳಿಗೆಲ್ಲ ಮಾಧ್ಯಮದವರಲ್ಲಿ ಉತ್ತರ ಇದೆಯೇ?

ಕೋವಿಡ್ ನಿಂದ ಹಿಂದುಳಿದ ಶಿಕ್ಷಣ ಕ್ಷೇತ್ರ ಮರಳಿ ತನ್ನ ಲಯ ಕಂಡುಕೊಳ್ಳುವಲ್ಲಿ ನಾವು ನಮ್ಮಿಂದಾದ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ವಿದ್ಯಾರ್ಥಿಗಳೂ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆದುದರಿಂದ ಅಂತರ್ಜಾಲ ಮಾಧ್ಯಮಗಳಿಗೆ ನನ್ನ ಕಳಕಳಿಯ ವಿನಂತಿ ಏನೆಂದರೆ ದಯವಿಟ್ಟು ಸುದ್ದಿ ಬಿತ್ತರಿಸುವ ಮುಂಚೆ ವಿಷಯಗಳ ನೈಜತೆಯನ್ನು ಪರಿಶೀಲಿಸಿ,ತದನಂತರ ಬಿತ್ತರಿಸಿ.

ಆ ಮೂಲಕ ಉಂಟಾಗುವ ಗೊಂದಲ , ಒತ್ತಡಗಳನ್ನು ನಿವಾರಿಸಿ, ವಿದ್ಯಾರ್ಥಿಗಳ ಭವಿಷ್ಯ ಸುಂದರವಾಗಿಸಲು ಕೈಜೋಡಿಸಿ, ಧನ್ಯವಾದಗಳು.

- ಮಂಜುಳಾ ಪ್ರಸಾದ್
- ಸಹಶಿಕ್ಷಕಿ, ಕೆಪಿಎಸ್ ತ್ಯಾವಣಿಗೆ.

## ಜಗಳೂರು : ನರೇಗಾ ಸಮರ್ಪಕ ಜಾರಿಗಾಗಿ 'ದುಡಿಯೋಣ ಬಾ' ಆಂದೋಲನಕ್ಕೆ ಚಾಲನೆ



ಜಗಳೂರು, ಮಾ. 15 - 'ದುಡಿಯೋಣ ಬಾ' ಆಂದೋಲನದಡಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿ (ಮನರೇಗಾ) ಕೂಲಿ ಕಾರ್ಮಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ ಹೇಳಿದರು.

ತಾಲ್ಲೂಕಿನ ಬಿದರಕೆರೆ ಗ್ರಾಮದಲ್ಲಿ ಗ್ರಾ.ಪಂ ವತಿಯಿಂದ ಹಮ್ಮಿಕೊಂಡಿದ್ದ 'ದುಡಿಯೋಣ ಬಾ' ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಅವರು ಮಾತನಾಡಿದರು.

ತಾಲೂಕಿನಲ್ಲಿ ಬೇಸಿಗೆ ಸಮಯದಲ್ಲಿ ಕೃಷಿ ಕೂಲಿ ಕಾರ್ಮಿಕರಿಗೆ ಆರ್ಥಿಕ ಸಂಕಷ್ಟ ನೀಗಿಸಲು ವಿದ್ಯಾರ್ಥಿಗಳ ಶೈಕ್ಷಣಿಕ ವರ್ಷದ ಆರಂಭದ ಖರ್ಚು ವೆಚ್ಚ ಭರಿಸಲು ಪೂರಕವಾಗಿ ಸರ್ಕಾರ ವಿನೂತನ ಕಾರ್ಯಕ್ರಮದ ಮೂಲಕ ಮನರೇಗಾ ಯೋಜನೆ ಸಮರ್ಪಕವಾಗಿ ಜಾರಿ ಗೊಳಿಸಿ ಉದ್ಯೋಗ ಕಲ್ಪಿಸುತ್ತಿದೆ.

ಗ್ರಾಮೀಣ ಭಾಗದಲ್ಲಿ ಪ್ರತಿಯೊಬ್ಬರೂ ಈ ಕಾರ್ಯಕ್ರಮವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿ.ಪಂ ಉಪ ಕಾರ್ಯದರ್ಶಿ ಆನಂದ್ ಮಾತನಾಡಿ, ಇಂದಿನಿಂದ ಜೂನ್ 15 ರವರೆಗೆ ಮೂರು ತಿಂಗಳು ಗ್ರಾಮೀಣಾಭಿವೃದ್ದಿ ಪಂಚಾಯತ್ ರಾಜ್ ಇಲಾಖೆಯ ನಿರ್ದೇಶನದಂತೆ ಗ್ರಾಮಗಳಲ್ಲಿ ಕರಪತ್ರದೊಂದಿಗೆ ಜಾಗೃತಿ ಮೂಡಿಸಿ ಸಮರ್ಪಕವಾಗಿ ಮನರೇಗಾ ಕಾಮಗಾರಿ ನೀಡಲಾಗುತ್ತದೆ ಎಂದರು.

ಪ್ರತಿ ಸೋಮವಾರ ಗ್ರಾ.ಪಂ ಕೇಂದ್ರದಲ್ಲಿ ಅಧಿಕಾರಿಗಳ ಉಪಸ್ಥಿತಿಯಲ್ಲಿ ಮನರೇಗಾ ಕೂಲಿ ಕಾರ್ಮಿಕರ ಬೇಡಿಕೆ ಪಟ್ಟಿ ಸ್ವೀಕರಿಸಲಾಗುವುದು ಹಾಗೂ ಜಾಬ್ ಕಾರ್ಡ್ ಪಡೆದ ಎರಡು-ಮೂರು ದಿನಗಳಲ್ಲಿಯೇ ಕಾಮಗಾರಿ ಕೆಲಸ ಆರಂಭಿಸಲಾಗುವುದು ಎಂದು ಮಾಹಿತಿ ನೀಡಿದರು. ಇದೇ ವೇಳೆ 4 ಕುಟುಂಬಗಳಿಗೆ ಉದ್ಯೋಗ ಚೀಟಿ ವಿತರಿಸಿದರು ಹಾಗೂ ಸ್ವಸಹಾಯ ಸಂಘಗಳಿಂದ 38 ಜನ ಕೂಲಿ ಕಾರ್ಮಿಕರ ಕೂಲಿ ಕೆಲಸದ ಬೇಡಿಕೆ ಪಡೆಯಲಾಯಿತು. ಮನೆ-ಮನೆಗೆ ತೆರಳಿ ಕರಪತ್ರ ಹಂಚಿ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ತಾ.ಪಂ ಸದಸ್ಯ ಬಸವರಾಜ್, ಜಿ.ಪಂ ಇಓ ಸಮನ್ವಯಾಧಿಕಾರಿ ಚಂದನ್, ತಾ.ಪಂ ಇಓ ಮಲ್ಲನಾಯ್ಕ, ಗ್ರಾ.ಪಂ ಅಧ್ಯಕ್ಷೆ ಶಿವಲಿಂಗಮ್ಮ, ಉಪಾಧ್ಯಕ್ಷ ಮುನಿಯಪ್ಪ, ಪಿಡಿಓ ಮರುಳಸಿದ್ದಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಆರ್ಯ ಈಡಿಗ ಸಮುದಾಯದ ಜನಸಂಖ್ಯೆ ಕ್ಷೀಣ



### ಹರಪನಹಳ್ಳಿಯಲ್ಲಿ ಪ್ರಣವಾನಂದ ಸ್ವಾಮೀಜಿ

ಹರಪನಹಳ್ಳಿ, ಮಾ.15- ಆರ್ಯ ಈಡಿಗ ಸಮುದಾಯದ ಜನಸಂಖ್ಯೆ ಕ್ಷೀಣಿಸುತ್ತಿದೆ. ಇದು ಹೀಗೇ ಆದರೆ ಮುಂದೊಂದು ದಿನ ಈ ಸಮುದಾಯ, ಸಮಾಜದಲ್ಲಿ ಎಲ್ಲಿದೆ ಎಂದು ಹುಡುಕುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬ ಆತಂಕವನ್ನು ರಾಣೇಬೆನ್ನೂರು ಶ್ರೀ ಪ್ರಣವಾನಂದ ಸ್ವಾಮೀಜಿ ವ್ಯಕ್ತಪಡಿಸಿದರು.

ಪಟ್ಟಣದ ಕಾಶಿ ಸಂಗಮೇಶ್ವರ ಮಠದ ಸಭಾಂಗಣದಲ್ಲಿ ಏರ್ಪಡಿಸಿದ್ದ ಆರ್ಯ ಈಡಿಗ ಬಂಧುಗಳ ಚಿಂತನ ಮಂಥನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಮ್ಮ ಸಮುದಾಯದ ದಂಪತಿಗಳು ಇನ್ನುಮುಂದೆ ಕಡ್ಡಾಯವಾಗಿ ಐದು ಮಕ್ಕಳನ್ನು ಹೆತ್ತು ಎರಡು ಮಕ್ಕಳನ್ನು ನೀವು ಸಾಕಿ, ಮೂರು ಮಕ್ಕಳನ್ನು ಮಠಕ್ಕೆ ಕೊಡಿ. ಅವರನ್ನು ನಾವು ಸಾಕಿ, ಸಲಹಿ ಸಮುದಾಯದ ಏಳಿಗೆಗೆ ಶ್ರಮಿಸುವಂತೆ ಅವರನ್ನು ತಯಾರು ಮಾಡುತ್ತೇವೆ ಎಂದರು.

ನಮ್ಮ ಸಮುದಾಯದ ಎಸ್.ಬಂಗಾರಪ್ಪನವರು ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಮುಂದೊಂದು ದಿನ ಮತ್ತೆ ನಮ್ಮ ಸಮಾಜದ ಒಬ್ಬರು ಖಂಡಿತವಾಗಿಯೂ ಈ ರಾಜ್ಯದ ಮುಖ್ಯಮಂತ್ರಿಗಳಾಗಲಿದ್ದಾರೆ ಎಂದು ರಾಜಕೀಯ ಭವಿಷ್ಯ ನುಡಿದರು. ಅವರ ಭವಿಷ್ಯ ನಿಜವಾಗಲಿದೆಯಾ ಕಾದು ನೋಡಬೇಕು.

ರಾಜ್ಯದ ಎಂಆರ್‌ಪಿಗಳಲ್ಲಿ ನಮ್ಮ ಸಮುದಾಯದ ಸಿಬ್ಬಂದಿಗಳನ್ನೇ ನೇಮಕ ಮಾಡಿಕೊಳ್ಳ ಬೇಕು ಎಂದು ಈಗಾಗಲೇ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದ ಅವರು, ನಮ್ಮ ರಾಜಕಾರಣಿಗಳು ತಮ್ಮ ಜವಾಬ್ದಾರಿಯನ್ನು ಮರೆತಂತಿದೆ. ಸಮಾಜದ ಪರಿಸ್ಥಿತಿಯನ್ನು ಅವಲೋಕಿಸಿ, ಈ ಬಗ್ಗೆ ಸರ್ಕಾರಗಳಿಗೆ ಮನವರಿಕೆ ಮಾಡಿಕೊಡಬೇಕು.

ಈಡಿಗ ಸಮಾಜವನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ತುಳಿಯಲು ವ್ಯವಸ್ಥಿತವಾಗಿ ಷಡ್ಯಂತ್ರ ನಡೆಯುತ್ತಿದೆ ಎಂದ ಅವರು ನಮ್ಮ ಸಮಾಜದ ಜಾತ್ಯತೀತ ನಾಯಕರಾಗಿದ್ದ ಎಸ್.ಬಂಗಾರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಎಲ್ಲಾ ಸಮಾಜಗಳ ಅಭಿವೃದ್ಧಿಗೂ ಶ್ರಮಿಸಿದ್ದರು.

ಮೂಡಬಿದಿರೆಯ ಸತ್ಯಾನಂದ ತೀರ್ಥರು ಮಾತನಾಡಿ, 'ಸಂತರ ನಡೆ ಸಮಾಜದ ಬಂಧುಗಳ ಕಡೆ' ಎನ್ನುವ ಕಾರ್ಯಕ್ರಮ ತುಂಬಾ ಅರ್ಥಪೂರ್ಣವಾಗಿದ್ದು, ಭಕ್ತರ ಸಹಕಾರವೇ ಶ್ರೀಗಳಿಗೆ ಬಲ. ಸಮಾಜ ಸೇವೆ ಮಾಡುವವರು ತ್ಯಾಗ ಮನೋಭಾವ ಹೊಂದಿರಬೇಕು. ನಮ್ಮ ಸಮುದಾಯಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆಯಬೇಕೆಂದರೆ ಅದು ಸಂಘಟನೆಯಿಂದ ಮಾತ್ರ ಸಾಧ್ಯ. ಹಾಗಾಗಿ ನಾವೆಲ್ಲ ಒಗ್ಗಟ್ಟಾಗಿ ಸಮಾಜವನ್ನು ಸಂಘಟಿಸಬೇಕು ಎಂದರು.

ಬೆಳಗಾವಿಯ ಅರುಣಾನಂದ ಶ್ರೀ ಮಾತನಾಡಿ, ಭಕ್ತಿ ಮಾರ್ಗದಲ್ಲಿ ನಡೆದರೆ ಮಾತ್ರ ಉತ್ತಮ ಫಲ ಸಿಗಲು ಸಾಧ್ಯ ಎಂದರು. ಹಡಗಲಿಯ ಅಯ್ಯನಗೌಡ, ಸಮಾಜದ ಗೌರವ ಅಧ್ಯಕ್ಷ ಈ. ದೇವದಾಸ್, ಅಧ್ಯಕ್ಷ ಎನ್. ಜಗದೀಶ್ ಗೌಡ್ರು, ಸಹ ಕಾರ್ಯದರ್ಶಿ ವೆಂಕಟರಾಜು, ಈಡಿಗ ಬಂಧು ಸಂಪಾದಕ ಶ್ರೀಕಾಂತ್, ಕಾರ್ಯದರ್ಶಿ ಕಂಚಿಕೇರಿ ಈ. ವೆಂಕಟೇಶ್, ಮಹಿಳಾ ಅಧ್ಯಕ್ಷೆ ಶಶಿಕಲಾ, ನಿಲಯ ಪಾಲಕ ಅಂಬರೀಶ್ ಗುತ್ತೇದಾರ್, ಮುಖಂಡರಾದ ಉಮೇಶ್, ಆಂಜನೇಯ, ಬೇವಿನಹಳ್ಳಿ ಚನ್ನಬಸಪ್ಪ, ಫಕ್ಕೀರಪ್ಪ, ಜೀವಪ್ಪ, ಪದ್ಮನಾಭ, ನಾರಾಯಣಸ್ವಾಮಿ, ರೋಹಿತ್ ಕುಮಾರ್, ದುರ್ಗಪ್ಪ, ಮಂಜಣ್ಣ, ಹೊಸಪೇಟೆ ವಕೀಲ ನಾಗರಾಜ್ ಇನ್ನಿತರರಿದ್ದರು.

## ಕ್ರಿಕೆಟ್ ಟೂರ್ನಿ: ಮಲೇಬೆನ್ನೂರು ಸೆಹ್ವಾಗ್ ತಂಡ ಪ್ರಥಮ



ಮಲೇಬೆನ್ನೂರು, ಮಾ.15- ಕೊಮಾರನಹಳ್ಳಿ ಗ್ರಾಮದಲ್ಲಿ ಕನಕ ಬ್ರಿಗೇಡ್ ವತಿಯಿಂದ ಶಿವರಾತ್ರಿ ಅಂಗವಾಗಿ ಪ್ರಥಮ ಬಾರಿಗೆ ಹಮ್ಮಿಕೊಂಡಿದ್ದ ಗ್ರಾಮಾಂತರ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಮಲೇಬೆನ್ನೂರಿನ ಸೆಹ್ವಾಗ್ ವಾರಿಯರ್ಸ್ ತಂಡ ಪ್ರಥಮ ಬಹುಮಾನ ಪಡೆದುಕೊಂಡಿದೆ.

ಭಾನುವಾರ ನಡೆದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಗ್ರಾ.ಪಂ. ಸದಸ್ಯ ಮಡಿವಾಳರ ಸುರೇಶ್, ಗುತ್ತಿಗೆದಾರ ಮಲ್ಲನಾಯ್ಕನಹಳ್ಳಿ ಅಶೋಕ್ ಇನ್ನಿತರರು ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಪ್ರಥಮ ಸ್ಥಾನ ಗಳಿಸಿದ ಸೆಹ್ವಾಗ್ ವಾರಿಯರ್ಸ್ ತಂಡಕ್ಕೆ 33,333 ರೂ. ನಗದು ಹಾಗೂ ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ ಪಡೆದ ಕೊಮಾರನಹಳ್ಳಿಯ ಕನಕ ಬ್ರಿಗೇಡ್ ತಂಡಕ್ಕೆ 22,222 ರೂ. ನಗದು ಹಾಗೂ ಆಕರ್ಷಕ ಟ್ರೋಫಿ ನೀಡಲಾಯಿತು. ಬಹುಮಾನ ದಾನಿಗಳಾದ ಶಾಸಕ ಎಸ್. ರಾಮಪ್ಪ, ಉದ್ಯಮಿಗಳಾದ ಕುಂಬಳೂರು ವಿರೂಪಾಕ್ಷಪ್ಪ, ನಂದಿಗಾವಿ ಶ್ರೀನಿವಾಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಕ್ರಿಕೆಟ್ ತಂಡಗಳಿಗೆ ಶುಭ ಹಾರೈಸಿ, ಆಟ ವೀಕ್ಷಿಸಿದರು.

ಜಿ.ಪಂ.ಸದಸ್ಯ ಎಂ.ಆರ್. ಮಹೇಶ್, ಹೋಟೆಲ್ ಪರಮೇಶ್ವರಪ್ಪ, ಕೆ.ಎಂ. ಕುಮಾರಸ್ವಾಮಿ, ಗಿರಳ್ಳಿ ಕರಿಬಸಪ್ಪ, ಕನಕ ಬ್ರಿಗೇಡ್‌ನ ಯು. ಅಣ್ಣೇಶ್, ಎಸ್. ಬಿ. ವಿಜಯ್, ಮುತ್ತುರಾಜ್, ಜಿ.ಕೆ. ಅಣ್ಣಯ್ಯ, ಪ್ರತಾಪ್, ಕನಕ ಬಾಯ್ಸ್ ತಂಡದ ಸುನೀಲ್, ಮನೋಹರ್ ಮಂಜುನಾಥ್, ಕೃಷ್ಣ, ಸಂತೋಷ್, ಚೇತನ್, ಚಿದಂಬರ ಹಾಗೂ ಕ್ರೀಡಾಭಿಮಾನಿಗಳು ಈ ವೇಳೆ ಹಾಜರಿದ್ದರು.

**ಬೇಕಾಗಿದ್ದಾರೆ**

**ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.**

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸ್ಥಳ : ಎ.ಕೆ. ಫಾರ್ಮ, ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.**

**ಸನ್‌ಶೈನ್ ಪುರಂತರ್ ಹಾಸ್ಪಿಟಲ್**

SUNSHINE PURANTAR HOSPITAL

3rd Main, MCC 'A' Block, Davangere - 577 002.

**ಬೇಕಾಗಿದ್ದಾರೆ**

1. Receptionist / ರಿಸೆಪ್ಷನಿಸ್ಟ್
2. OT Nursing / ಓ.ಟಿ. ನರ್ಸಿಂಗ್
3. Ward Boy & Ayaa / ವಾರ್ಡ್ ಬಾಯ್ & ಆಯಾ
4. Assistant Managers / ಅಸಿಸ್ಟೆಂಟ್ ಮ್ಯಾನೇಜರ್

Attractive salary Based on Eligibility & Experience
Apply with : Biodata, Recent Colour Photo, Address Proof , Degree Certificate.

SUNSHINE PURANTAR HOSPITAL

CONTACT : 94489 55667, 88846 14545

## ವಾಸವಿ ಯುವಜನ ಸಂಘಕ್ಕೆ ಅತ್ಯುತ್ತಮ ಪ್ರಶಸ್ತಿ



ದಾವಣಗೆರೆ, ಮಾ.15- ತುಮಕೂರಿನಲ್ಲಿ ಇತ್ತೀಚೆಗೆ ನಡೆದ ವಾಸವಿ ಯುವಜನ ಮಹಾಸಭಾ ಬೆಂಗಳೂರು ಇವರ ಸರ್ವ ಸದಸ್ಯರ ಸಭೆಯಲ್ಲಿ ಕರ್ನಾಟಕದ 325 ವಾಸವಿ ಯುವಜನ ಸಂಘಗಳಲ್ಲಿ ದಾವಣಗೆರೆಯ ಡಿಸಿಎಂ ಟೌನ್ ಶಿಪ್ ವಾಸವಿ ಯುವಜನ ಸಂಘವು 2019-2020 ಹಾಗೂ 2020-2021 ಸಾಲಿನ ಅತ್ಯುತ್ತಮ ಸಂಘ ಎಂಬ ಪ್ರಶಸ್ತಿಗೆ ಪಾತ್ರವಾಗಿದೆ.

ಈ ಸಂದರ್ಭದಲ್ಲಿ ಅಧ್ಯಕ್ಷ ಎಸ್.ಆರ್. ಮಂಜುನಾಥ್, ನಿಕಟ ಪೂರ್ವ ಅಧ್ಯಕ್ಷ ಎಸ್. ಬಾಲಚಂದ್ರ, ಕಾರ್ಯದರ್ಶಿ ಹೆಚ್.ಕೆ. ಕೃಷ್ಣ ಹಾಗೂ ಪದಾಧಿಕಾರಿಗಳಾದ ಹೆಚ್.ಎಸ್. ಯತೀಂದ್ರ ಕುಮಾರ್, ಡಿ.ವಿ. ಸುಧೀಂದ್ರ ಗುಪ್ತ, ಹೆಚ್.ವಿ. ಶ್ರೀನಿವಾಸ್, ಅಮರ್, ತಿಲಕ್ ಕುಮಾರ್, ಜೆ.ಆರ್. ಮಾಲತೇಶ, ಕೆ.ಪಿ. ನಾಗರಾಜ್, ಜೆ.ಬಿ. ಮಾಲತೇಶ, ಬಿ.ಆರ್. ಲೋಕೇಶ್, ಅನಿಲ್ ಕುಮಾರ್, ನವೀನ್, ಸಲಹೆಗಾರ ಕಾಶಿವಿಶ್ವನಾಥ ಸೇರಿದಂತೆ ಇತರರಿದ್ದರು.

## ಹೊಂಡದ ರಸ್ತೆ ಶಾಲೆ ಹಳೇ ವಿದ್ಯಾರ್ಥಿ ಸಂಘಕ್ಕೆ ಆಯ್ಕೆ

ದಾವಣಗೆರೆ, ಮಾ.15- ನಗರದ ಹೊಂಡದ ರಸ್ತೆ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳ ಆಯ್ಕೆ ನಡೆದು ಮಹಮ್ಮದ್ ಅಶ್ರಫ್ ಗೌರವಾಧ್ಯಕ್ಷರಾಗಿ ಹಾಗೂ ಕೆ.ಸಿ. ಮೋಹನ್‌ಕುಮಾರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಕಾರ್ಯಾಧ್ಯಕ್ಷರಾಗಿ ರಾಮಕೃಷ್ಣ, ಉಪಾಧ್ಯಕ್ಷರಾಗಿ ಜಿ.ಸಿ. ಶ್ರೀಪಾದ, ಬಿ.ಆರ್. ಸರೋಜ, ಡಾ. ಶ್ರೀನಿವಾಸ್, ಎಸ್. ನೇತ್ರಾವತಿ, ಕಾರ್ಯದರ್ಶಿ ನಾಸಿರ್‌ಖಾನ್, ಉಪ ಕಾರ್ಯದರ್ಶಿಗಳಾಗಿ ಸಲೀಂ, ಜಿ. ಕರಿಬಸಪ್ಪ, ನಾಗರಾಜ ಜಿಮ್, ಸಾಂಸ್ಕೃತಿಕ ಕಾರ್ಯದರ್ಶಿ ಆರ್. ರಾಜು, ಶ್ರೀ ಸಿಗಂಧೂರೇಶ್ವರಿ ಗ್ಯಾರೇಜ್, ಖಜಾಂಚಿ ಜಿ. ನಾಗರಾಜ, ಸಹ ಖಜಾಂಚಿ ಎನ್. ಬಸವರಾಜ್ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಹೆಚ್.ಎಸ್. ಶಿವಾನಂದ್, ಶಾಮಿಯಾನ ನಾಗರಾಜ್, ಬಿ.ವಿ. ಬಸವರಾಜ್ ಆಯ್ಕೆಗೊಂಡಿದ್ದಾರೆ.

**ಮಳೆಯಿಂದಾಗಿ ಅಂಗಡಿಯ ದಾಖಲೆಗಳು ನಾಶ**





**ಶ್ರೀಮತಿ ಮಮತ ಎಸ್**. ಕೋಂ ಸಂಕೋಳ್ ಚಂದ್ರಶೇಖರ್, ಮಾಲೀಕರು, **ಸಂಕೋಳ್ ಶಿವಪ್ಪ ಅಂಡ್ ಸನ್ಸ್**, # 432/4, ಮಿಟ್ಲಕಟ್ಟೆ ರಸ್ತೆ, ಶಾಮನೂರು, ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ ವಾಸಿಯಾದ ನಾನು ದೇವರ ಹೆಸರಿನಲ್ಲಿ ಪ್ರಮಾಣಪೂರ್ವಕವಾಗಿ ಹೇಳುವುದೇನೆಂದರೆ,

ನಮ್ಮ ಸಂಸ್ಥೆಯ ಲೆಕ್ಕಪತ್ರಗಳನ್ನು ಕಂಪ್ಯೂಟರ್ ನಲ್ಲಿ ಅಳವಡಿಸಲಾಗಿರುತ್ತದೆ. ಬಿಲ್ಲುಗಳನ್ನೂ ಸಹ ಕಂಪ್ಯೂಟರ್ ಬಿಲ್ಲಿಂಗ್ ಮಾಡಿ ನೀಡುತ್ತಿದ್ದೆವು. ನಮ್ಮ ಸಂಸ್ಥೆಯ ಸಂಪೂರ್ಣ ವ್ಯವಹಾರ ಗಣಕೀಕೃತವಾಗಿರುತ್ತದೆ.

ಈ ಹಿಂದೆ 2016-2017ನೇ ಸಾಲಿನಲ್ಲಿ ಅತೀ ಹೆಚ್ಚು ಮಳೆಗಾಲವಾಗಿದ್ದು, ಅದರಂತೆ ಶಾಮನೂರಿನಲ್ಲಿಯೂ ಸಹ ಅತ್ಯಂತ ಹೆಚ್ಚಾಗಿ ಮಳೆ ಬಂದು, ಮಳೆ ನೀರಿಗೆ ಚರಂಡಿಗಳೆಲ್ಲಾ ತುಂಬಿ, ಹಲವಾರು ಮನೆಗಳಿಗೆ, ಅಂಗಡಿಗಳಿಗೆ ನೀರು ನುಗ್ಗಿತ್ತು. ಅದರಂತೆ ನಮ್ಮ ಸಂಸ್ಥೆಯು ಇರುವ ಮಳಿಗೆಯ ಒಳಗೂ ಸಹ ನೀರು ನುಗ್ಗಿ ಮಳಿಗೆಯಲ್ಲಿದ್ದ ಸಿಮೆಂಟ್, ವಾಲ್ ಪುಟ್ಟಿ, ಪ್ರೈಮರ್ ಇನ್ನಿತರೆ ಸಾಮಗ್ರಿಗಳು ಮತ್ತು ಕಂಪನಿಗಳಿಂದ ನೀಡಿದ್ದ ಬಿಲ್ ಪುಸ್ತಕ, ನಮ್ಮ ಅಂಗಡಿಯ ಬಿಲ್ ಪುಸ್ತಕಗಳು ಹಾಳಾಗಿದ್ದವು. ಮಳಿಗೆಯಲ್ಲಿದ್ದ ಕಂಪ್ಯೂಟರ್ ಸಿಸ್ಟಂ ಒಳಗೂ ನೀರು ನುಗ್ಗಿ ಕಂಪ್ಯೂಟರ್ ಗಳು ದುರಸ್ತಿಪಡಿಸದಂತೆ ಹಾಳಾದ ಪ್ರಯುಕ್ತ ವಾಣಿಜ್ಯ ತೆರಿಗೆ ಇಲಾಖೆಗೆ 2016-17ನೇ ಸಾಲಿನ ನಮ್ಮ ಅಂಗಡಿಯ ವ್ಯವಹಾರದ ದಾಖಲೆಗಳನ್ನು ಸಲ್ಲಿಸಲು ಆಗಿರುವುದಿಲ್ಲ. ಕಾರಣ, ದಾಖಲೆಗಳು ಸಿಗದ ಪ್ರಯುಕ್ತ ನಿಖರ ಮಾಹಿತಿಯನ್ನು ನಾವು ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸಿರುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯವಾದವುಗಳೆಂದು ದಾವಣಗೆರೆ ನೋಟರಿಯವರ ಸಮಕ್ಷಮದಲ್ಲಿ ದಿನಾಂಕ 6.3.2021ರಂದು ಪ್ರಮಾಣೀಕರಿಸಿದ್ದೇನೆ.

ಸಹಿ/- **ಮಮತ ಎಸ್.**

ಮಾಲೀಕರು, **ಸಂಕೋಳ್ ಶಿವಪ್ಪ ಅಂಡ್ ಸನ್ಸ್**, ಮಿಟ್ಲಕಟ್ಟೆ ರಸ್ತೆ, ಶಾಮನೂರು.

**ಹೃತ್ಪೂರ್ವಕ ಅಭಿನಂದನೆಗಳು**



ದಾವಣಗೆರೆ ತಾಲ್ಲೂಕಿನ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಸಿದ್ದನೂರಿನ

**ಎಸ್.ಎಂ ಮಂಜುನಾಥಯ್ಯ**

ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

**ಎ.ಎಸ್. ಬಸವರಾಜ್**, ನಿರ್ದೇಶಕರು
ವ್ಯವಸಾಯೋತ್ಪನ್ನ ಸಹಕಾರ ಸಂಘ, ತುಂಬಿಗೆರೆ.

**ಸಣ್ಣಗೌಡ್ರ ಕರಿಬಸಪ್ಪ ಕೊಗ್ಗನೂರು**

# ಶಾಸಕರ ಕೆಲಸಕ್ಕೆ ಆದ್ಯತೆ ನೀಡಿ

## ಸಚಿವರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಸೂಚನೆ



ಬೆಂಗಳೂರು, ಮಾ. 15 - ಕಡತಗಳನ್ನು ಕಚೇರಿ ಯಲ್ಲೇ ಕೊಳೆಯಲು ಬಿಡಬೇಡಿ, ಅಭಿವೃದ್ಧಿ ಕಾರ್ಯಗಳಿಗೆ ಸ್ಪಂದಿಸಿ, ಶಾಸಕರ ಕೆಲಸ-ಕಾರ್ಯಗಳಿಗೆ ಆದ್ಯತೆ ನೀಡಿ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ಚಾಟಿ ಬೀಸಿದ್ದಾರೆ.

ನಿಮ್ಮ ಕಾರ್ಯಗಳ ಬಗ್ಗೆ ಶಾಸಕರು ದೂರುಗಳನ್ನು ಹೇಳುತ್ತಲೇ ಇರುತ್ತಾರೆ. ಅವರಿಗೆ ಸ್ಪಂದಿಸದಿದ್ದರೆ, ಸರ್ಕಾರ ನಡೆಯುವುದಾದರೂ ಹೇಗೆ? ಎಂದು ಪ್ರಶ್ನಿಸಿದ್ದಾರೆ.

ವಿಧಾನಮಂಡಲದಲ್ಲಿ ಪ್ರತಿಪಕ್ಷ ಕಾಂಗ್ರೆಸ್ಸನ್ನು ಸಮರ್ಥವಾಗಿ ಎದುರಿಸಬೇಕೆಂಬ ಉದ್ದೇಶದಿಂದ ಇಂದು ಅನೌಪಚಾರಿಕವಾಗಿ ತಮ್ಮ ಮಂತ್ರಿಗಳ ಜೊತೆ ಸುದೀರ್ಘ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ನಗು-ನಗುತ್ತಲೇ ಸಚಿವರುಗಳ ಕಾರ್ಯವೈಖರಿ ಬಗ್ಗೆ ಪ್ರಸ್ತಾಪ ಮಾಡಿ ಕಿವಿಮಾತು ಹೇಳಿದ್ದಾರೆ.

ಹಣಕಾಸು ಮಸೂದೆಗಳಿಗೆ ಅಂಗೀಕಾರ ಆಗುವವರೆಗೂ ಅಂದರೆ, ಪ್ರಸಕ್ತ ಅಧಿವೇಶನ ಕಲಾಪ ಮುಗಿಯುವವರೆಗೂ ರಾಜಧಾನಿ ಬಿಟ್ಟು ಕದಲಬೇಡಿ. ಸದನದಲ್ಲೇ ಇದ್ದು, ಪ್ರತಿಪಕ್ಷಗಳು ಎತ್ತುವ ಪ್ರಶ್ನೆಗಳಿಗೆ ಮತ್ತು ಆರೋಪಗಳಿಗೆ ಉತ್ತರಿಸಿ ಸಮರ್ಥವಾಗಿ ಎದುರಿಸಿ ಎಂದಿದ್ದಾರೆ.

ನಿಮ್ಮಲ್ಲಿನ ಒಗ್ಗಟ್ಟನ್ನು ಎಂದೂ ಕಳೆದು ಕೊಳ್ಳಬೇಡಿ, ಅಧಿವೇಶನ ಮುಗಿದ ನಂತರ ನಿಮ್ಮ-ನಿಮ್ಮ ಜಿಲ್ಲೆಗಳಿಗೆ ತೆರಳಿ, ಅಷ್ಟರೊಳಗೆ ಕಳೆದ ಕೆಲವಾರು ತಿಂಗಳಿಂದ ನಿಮ್ಮ ಕಚೇರಿ ಮತ್ತು ಇಲಾಖೆಯಲ್ಲಿನ ಕಡತಗಳಿಗೆ ಮೋಕ್ಷ ನೀಡಿ. ಶಾಸಕರನ್ನು ಕಚೇರಿಯಿಂದ ಕಚೇರಿಗೆ ಅಲೆಸಬೇಡಿ, ಕಾನೂನು ಬದ್ಧವಾಗಿರುವ ಮನವಿಗಳಿಗೆ ತಕ್ಷಣ ಸ್ಪಂದಿಸಿ ಆದೇಶ ಮಾಡಿ. ಪ್ರತಿ ತಿಂಗಳು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅಲ್ಲಿಯೇ ಅಭಿವೃದ್ಧಿ ಕೆಲಸಗಳ ಜೊತೆ ಶಾಸಕರ ಅಹವಾಲುಗಳಿಗೂ ಸ್ಪಂದಿಸಿ ಎಂದು ತಿಳಿಸಿದ್ದಾರೆ.

ಸರ್ಕಾರಕ್ಕೆ ಕಳಂಕ ತರಲು ಪ್ರತಿಪಕ್ಷ ನಾಯಕರು ಏನೆಲ್ಲಾ ಮಾಡುತ್ತಾರೆ ಎಂಬುದು ನಿಮ್ಮ ಗಮನಕ್ಕೆ ಬಂದಿದೆ, ಎಚ್ಚರಿಕೆಯಿಂದ ನಮ್ಮ ಕೆಲಸ ಮಾಡಿದರೆ ಮುಂದಾಗ ಬಹುದಾದ ಅನಾಹುತಗಳನ್ನು ತಪ್ಪಿಬಹುದು ಎಂದು ಪರೋಕ್ಷವಾಗಿ ರಮೇಶ್ ಜಾರಕಿಹೊಳಿ ಪ್ರಕರಣವನ್ನು ಪ್ರಸ್ತಾಪಿಸದೆ ಸಚಿವರುಗಳಿಗೆ ಅವರು ಬುದ್ಧಿವಾದ ಹೇಳಿದ್ದಾರೆ.

# ಎಸ್ಪಿ ಹೆಸರಿನ ನಕಲಿ ಖಾತೆಯಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದ ಖದೀಮರು



ದಾವಣಗೆರೆ, ಮಾ.15- ಉತ್ತರ ಪ್ರದೇಶದಲ್ಲಿ ನನ್ನ ಫೇಸ್‌ಬುಕ್ ಖಾತೆಯನ್ನು ನಕಲಿಯಾಗಿ ಸೃಷ್ಟಿಸಲಾಗಿದ್ದು, ಈ ಖಾತೆಯನ್ನು ರದ್ದುಗೊಳಿಸಲಾಗಿದೆ. ಈ ಸಂಬಂಧ ತನಿಖೆ ಮುಂದುವರೆದಿದೆ ಎಂದು ಎಸ್ಪಿ ಹನುಮಂತರಾಯ ತಿಳಿಸಿದರು.

ಇತ್ತೀಚೆಗೆ ನನ್ನ ಫೇಸ್‌ಬುಕ್ ಖಾತೆಯನ್ನು ನಕಲಿಯಾಗಿ ಸೃಷ್ಟಿಸಿ ಸುಮಾರು 100 ಜನರಿಗೆ ರಿಕ್ವೆಸ್ಟ್ ಕಳುಹಿಸಿ ಅದರಲ್ಲಿ ಒಬ್ಬರಿಗೆ 9 ಸಾವಿರ ರೂ.ಗೆ ಬೇಡಿಕೆ ಇಡಲಾಗಿತ್ತು ಎಂದು ಸುದ್ದಿಗೋಷ್ಠಿಯಲ್ಲಿಂದು ಹೇಳಿದರು.

ಸೈಬರ್ ಕಳ್ಳರು ಹಣ ಮಾಡಲು ಹೊಸ ಮಾರ್ಗಗಳನ್ನು ಹುಡುಕುತ್ತಿದ್ದಾರೆ. ಬ್ಯಾಂಕ್ ಅಧಿಕಾರಿಗಳ ಸೋಗಿನಲ್ಲಿ, ಓಟಿಪಿ ಸಂಖ್ಯೆ, ಇ-ಮೇಲ್ ಐಡಿ, ಮೊಬೈಲ್ ಬಿಲ್ ಬಗ್ಗೆ ಹೀಗೆ ನಾನಾ ಕಾರಣಗಳ ನೆಪದಲ್ಲಿ ಬ್ಯಾಂಕಿನ ವಿವರ, ಮೊಬೈಲ್ ನಂಬರ್, ಆಧಾರ್ ಸಂಖ್ಯೆ, ಇ-ಮೇಲ್ ಐಡಿ ಸೇರಿದಂತೆ ವೈಯಕ್ತಿಕ ವಿವರಗಳನ್ನು ಪಡೆದು ವಂಚಿಸಲಾಗುತ್ತಿದೆ. ಹಾಗಾಗಿ ದೂರವಾಣಿ ಮುಖಾಂತರವಾಗಲೀ, ಅಪರಿಚಿತರಿಗಾಗಲೀ ಯಾವುದೇ ವೈಯಕ್ತಿಕ ಮಾಹಿತಿ ನೀಡದೇ ಎಚ್ಚರಿಕೆ ವಹಿಸುವುದು ಮುಖ್ಯ ಎಂದು ಮುನ್ನೆಚ್ಚರಿಸಿದರು.

ಫೇಸ್ ಬುಕ್, ವಾಟ್ಸಾಪ್, ಟ್ವಿಟ್ಟರ್ ಸೇರಿದಂತೆ ಸಾಮಾಜಿಕ ಜಾಲ ತಾಣಗಳಲ್ಲಿ ಸ್ನೇಹಿತರು, ಪರಿಚಿತರ ಹೊರತುಪಡಿಸಿ ಸಾರ್ವಜನಿಕವಾಗಿ ಯಾವುದೇ ವೈಯಕ್ತಿಕ ಮಾಹಿತಿಗಳನ್ನು ಶೇರ್ ಮಾಡದೇ ಗೌಪ್ಯತೆ ಕಾಪಾಡಿಕೊಳ್ಳುವುದು ಸೂಕ್ತ. ವಂಚನೆಗಳಿಂದ ಪಾರಾಗಲು ಮುನ್ನೆಚ್ಚರಿಕೆ ವಹಿಸುವಂತೆ ನಮ್ಮ ಇಲಾಖೆಯಿಂದಲೂ ಕರಪತ್ರಗಳನ್ನು ತಯಾರಿಸಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುವುದು. ಸಾಮಾಜಿಕ ಜಾಲ ತಾಣಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೂ ಜಾಗೃತಿ ಮೂಡಿಸುವುದಾಗಿ ವಿವರಿಸಿದರು.

ಚನ್ನಗಿರಿ ಶಾಸಕ ಮಾಡಾಳು ವಿರುಪಾಕ್ಷಪ್ಪ ಅವರ ತೋಟದಲ್ಲಿ ಗಂಧ ಮತ್ತು ತೇಗದ ಮರಗಳ ಕಳವು ಪ್ರಕರಣ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತನಿಖೆಗೆ ಸೂಚನೆ ನೀಡಲಾಗಿದೆ. ಶಾಸಕರ ತೋಟದಲ್ಲಿ ಈಗಾಗಲೇ 3 ಬಾರಿ ಗಂಧದ ಮರಗಳ ಕಳ್ಳತನ ನಡೆದಿದೆ. ಈ ಹಿನ್ನೆಲೆಯಲ್ಲಿ ಸಿಸಿ ಟಿವಿ ಹಾಕಲು ಸೂಚನೆ ನೀಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಗಾಂಜಾ ಮತ್ತು ಅಕ್ರಮ ಗಣಿಗಾರಿಕೆ ನಿಯಂತ್ರಣ ಹಾಗೂ ಸ್ಫೋಟಕಗಳ ಪತ್ತೆ ಕಾರ್ಯಾಚರಣೆ ಮುಂದುವರೆದಿದೆ ಎಂದರು.

### ಮೊದಲ ಬಾರಿಗೆ ಅಧ್ಯಕ್ಷ ಗಾದಿ ಹಿಡಿದ ಬಿಜೆಪಿಯಿಂದ ವಿಜಯೋತ್ಸವ

# ಮಲೇಬೆನ್ನೂರು ಪುರಸಭೆ ಅಧ್ಯಕ್ಷರಾಗಿ ಶ್ರೀಮತಿ ಆಯ್ಕೆ





ಮಲೇಬೆನ್ನೂರು, ಮಾ.15- ಇಲ್ಲಿನ ಪುರಸಭೆಯ ನೂತನ ಅಧ್ಯಕ್ಷರಾಗಿ 3ನೇ ವಾರ್ಡ್‌ನ ಬಿಜೆಪಿ ಸದಸ್ಯೆ ಶ್ರೀಮತಿ ಪಾನಿಪೂರಿ ರಂಗನಾಥ್ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿಯ 7, ಜೆಡಿಎಸ್‌ನ 5 ಹಾಗೂ ಪಕ್ಷೇತರ ಸದಸ್ಯರಾದ ಮಹಾಲಿಂಗಪ್ಪ ಮಾಸಣಗಿ ಶೇಖರಪ್ಪ ಮತ್ತು ಕಾಂಗ್ರೆಸ್‌ನ 9 ಸದಸ್ಯರ ಪೈಕಿ ಎ.ಆರೀಫ್ ಅಲಿ, ದಾದಾವಲಿ ಮಾತ್ರ ಹಾಜರಿದ್ದರು.

ಒಟ್ಟು 23 ಸದಸ್ಯರ ಪೈಕಿ 16 ಜನ ಸದಸ್ಯರು ಮಾತ್ರ ಭಾಗವಹಿಸಿದ್ದರು. 7 ಜನ ಕಾಂಗ್ರೆಸ್ ಸದಸ್ಯರು ಗೈರು ಹಾಜರಾಗಿದ್ದರು. ಬಿಜೆಪಿಯ ಐವರು ನಾಮಿನಿ ಸದಸ್ಯರಿಗೆ ಮತದಾನದ ಹಕ್ಕು ಇಲ್ಲದ ಕಾರಣ ಸಭೆಗೆ ಆಹ್ವಾನ ಇರಲಿಲ್ಲ.

ಬಿಜೆಪಿ-ಜೆಡಿಎಸ್ ಪಕ್ಷಗಳ ಒಪ್ಪಂದಂತೆ ಜೆಡಿಎಸ್‌ನ ಶ್ರೀಮತಿ ನಾಹೀದ ಅಂಜುಂ ಸೈಯದ್ ಇಸ್ರಾರ್ ಅವರು ರಾಜೀನಾಮೆ ನೀಡಿದ್ದರಿಂದ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಜೆಡಿಎಸ್ ಕೊಟ್ಟ ಮಾತಿಗಿಂತ ಒಂದು ತಿಂಗಳು ತಡವಾಗಿ ಬಿಜೆಪಿಯವರಿಗೆ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟಿತು. ಈಗ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಮತಿ ಅವರ ಅಧಿಕಾರ ಮೇ 24 ಕ್ಕೆ ಅಂತ್ಯಗೊಳ್ಳಲಿದೆ.

ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಉಪತಹಶೀಲ್ದಾರ್ ಆರ್.ರವಿ, ಚುನಾವಣೆ ಶಾಖೆಯ ಸೋಮಶೇಖರ್, ಪ್ರಶಾಂತ್ ಪುರಸಭೆಯ ವ್ಯವಸ್ಥಾಪಕ ದಿನಕರ್ ಹಾಜರಿದ್ದು ಸಹಕರಿಸಿದರು.

ಪರೀಕ್ಷಾರ್ಥ ಉಪವಿಭಾಗಾಧಿಕಾರಿ ಶ್ರೀಮತಿ ದುರ್ಗಾಶ್ರೀ ಅವರು ಉಪಸ್ಥಿತರಿದ್ದರು.

**ಬಿಜೆಪಿ ವಿಜಯೋತ್ಸವ :** ಮಲೇಬೆನ್ನೂರು ಪುರಸಭೆಯ 5 ವರ್ಷದ ಅವಧಿಯಲ್ಲಿ ಬಿಜೆಪಿ ಇದೇ ಮೊದಲ ಬಾರಿಗೆ ಅಧ್ಯಕ್ಷ ಗಾದಿ ಹಿಡಿದಿದ್ದು, ಚುನಾವಣೆ ನಂತರ ಬಿಜೆಪಿ ವಿಜಯೋತ್ಸವ ಆಚರಿಸಿತು. ಎಲ್ಲೆಡೆ ಬಿಜೆಪಿ ಬಾವುಟಗಳು ರಾರಾಜಿಸಿದವು. ಮೆರವಣಿಗೆ ಮೂಲಕ ಪಟ್ಟಣದ ಬಸವೇಶ್ವರ ದೇವಸ್ಥಾನ ಹಾಗೂ ಗ್ರಾಮ ದೇವತೆಗಳಾದ ಏಕನಾಥೇಶ್ವರ, ಕೋಡಿ ಮಾರಮ್ಮ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು.

### ಪುರಸಭೆಯಲ್ಲಿ ಬಿಜೆಪಿ ಹಿಡಿತ ಸಾಧಿಸಿದ ವಾಗೀಶ್ ಸ್ವಾಮಿ ಅವರಿಗೆ ಸಿದ್ದೇಶ್ವರ, ಹರೀಶ್ ಮೆಚ್ಚುಗೆ

**ಯಶಸ್ವಿ :** 2016ರಲ್ಲಿ ನಡೆದ ಪುರಸಭೆ ಚುನಾವಣೆಯಲ್ಲಿ 7 ಸದಸ್ಯರನ್ನು ಆಯ್ಕೆ ಮಾಡುವಲ್ಲಿ ಶ್ರಮ ವಹಿಸಿ ಯಶಸ್ವಿಯಾಗಿದ್ದ ಬಿಜೆಪಿ ಮುಖಂಡ ಹಾಗೂ ಜಿ.ಪಂ. ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ ಅವರು ಜೆಡಿಎಸ್‌ನವರನ್ನು ಮತ್ತು ಪಕ್ಷೇತರ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ ಪುರಸಭೆಯಲ್ಲಿ ಕಿಂಗ್‌ಮೇಕರ್ ಆಗಿದ್ದರು.

ಇದೀಗ ಬಿಜೆಪಿಯ ಶ್ರೀಮತಿ ಅವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡುವ ಮೂಲಕ ತಮ್ಮ ಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಪಡಿಸುವಲ್ಲಿ ಯಶಸ್ವಿಯಾದ ವಾಗೀಶ್ ಸ್ವಾಮಿ ಅವರಿಗೆ ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ.ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಹಾಗೂ ಬಿಜೆಪಿ ಕಾರ್ಯಕರ್ತರಿಂದ ಮೆಚ್ಚುಗೆ ವ್ಯಕ್ತವಾಯಿತು.

**ಅಭಿನಂದನೆ :** ಚುನಾವಣೆ ನಂತರ ನೂತನ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್ ಅವರನ್ನು ಸಂಸದ ಜಿ.ಎಂ.ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ.ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತ್‌ರಾವ್ ಜಾಧವ್, ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಪುರಸಭೆ ಉಪಾಧ್ಯಕ್ಷೆ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಂತೇಶ್ ಸ್ವಾಮಿ, ನಿಕಟಪೂರ್ವ ಅಧ್ಯಕ್ಷೆ ಶ್ರೀಮತಿ ನಾಹೀದ ಅಂಜುಂ ಸೈಯದ್ ಇಸ್ರಾರ್ ಸೇರಿದಂತೆ ಪುರಸಭೆಯ ಬಿಜೆಪಿ, ಜೆಡಿಎಸ್ ಹಾಗೂ ಪಕ್ಷೇತರ ನಾಮಿನಿ ಸದಸ್ಯರು, ದಿಶಾ ಕಮಿಟಿ ಸದಸ್ಯ ಐರಣಿ ಅಣ್ಣಪ್ಪ, ಬಿಜೆಪಿ ಮುಖಂಡರಾದ ಕೆ.ಜಿ.ವೀರನಗೌಡ, ಮುದೇಗೌಡ್ರ ತಿಪ್ಪೇಶ್, ಬಿ.ಬಸವರಾಜಪ್ಪ, ಎಸ್.ಕರಿಬಸಪ್ಪ, ನಿಟ್ಟೂರಿನ ಇ.ಎಂ. ಮರುಳಸಿದ್ದೇಶ್, ಜಿಗಳಿಯ ಚಂದ್ರಪ್ಪ, ಪಾಟೀಲ್, ಹನುಮಗೌಡ, ಕುಂಬಳೂರಿನ ಹೊರಟ್ಟಿ ರಾಜು, ಕೊಮಾರನಹಳ್ಳಿಯ ಕೆ. ಉಜ್ಜೇಶ್, ಐರಣಿ ಮಹೇಶ್ವರಪ್ಪ, ಆಶ್ರಯ ಸಮಿತಿ ಸದಸ್ಯ ಬಿ.ಚಂದ್ರಪ್ಪ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.

# 1-5 ತರಗತಿ ನಡೆಸುವ ಶಾಲೆ ವಿರುದ್ಧ ಕ್ರಮ

ಬೆಂಗಳೂರು, ಮಾ. 15 - ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರದ ಸೂಚನೆ ಇಲ್ಲದೇ ಹೋದರೂ 1 ರಿಂದ 5ನೇ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯ ಅನುಮತಿಯೊಂದಿಗೆ 6ನೇ ತರಗತಿಯಿಂದ ಮೇಲ್ಪಟ್ಟ ತರಗತಿಗಳನ್ನು ಮಾತ್ರವೇ ಆರಂಭಿಸಲು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಅನುಮತಿ ನೀಡಿದೆ. ಆದರೆ, ರಾಜ್ಯದ ಹಲವೆಡೆ ಕೆಲವು ಖಾಸಗಿ ಶಾಲೆಗಳು 1 ರಿಂದ 5ನೇ ತರಗತಿಗಳನ್ನು ಅನಧಿಕೃತವಾಗಿ ನಡೆಸುತ್ತಿರುವ ಕುರಿತು ಮಾಧ್ಯಮಗಳಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಇಂತಹ ಶಾಲೆಗಳ ಕುರಿತು ಕ್ರಮ ಕೈಗೊಳ್ಳಬೇಕೆಂದು ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಪರಿಶೀಲನಾ ತಂಡಗಳನ್ನು ರಚಿಸಿ, ಈ ರೀತಿ ಅನಧಿಕೃತವಾಗಿ 1 ರಿಂದ 5ನೇ ತರಗತಿಗಳನ್ನು ನಡೆಸುತ್ತಿರುವ ಶಾಲೆಗಳು, ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕುರಿತು ಕೂಡಲೇ ಸುತ್ತೋಲೆ ಹೊರಡಿಸಬೇಕೆಂದು ಸುರೇಶ್ ಕುಮಾರ್ ಇಲಾಖೆಯ ಆಯುಕ್ತರು ಮತ್ತು ಅಪರ ಆಯುಕ್ತರುಗಳಿಗೆ ಸೂಚನೆ ನೀಡಿದ್ದಾರೆ.

# ಡಿಡಿಸಿಸಿ ಬ್ಯಾಂಕ್ ವೃತ್ತಿಪರ ನಿರ್ದೇಶಕರಾಗಿ ದಿವಾಕರ್, ಮಂಜಪ್ಪ ನೇಮಕ






ದಾವಣಗೆರೆ, ಮಾ. 15 - ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರುಗಳಾಗಿ ಹಿರಿಯ ನ್ಯಾಯವಾದಿ ಹೆಚ್. ದಿವಾಕರ್ ಮತ್ತು ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕ ಬಿ.ಹೆಚ್. ಮಂಜಪ್ಪ ಅವರುಗಳು ನೇಮಕಗೊಂಡಿದ್ದಾರೆ.

ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಎಸ್. ವೇಣುಗೋಪಾಲರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ದಿವಾಕರ್ ಮತ್ತು ಮಂಜಪ್ಪ ಅವರುಗಳನ್ನು ಕೋ-ಆಪ್ ಮಾಡಿಕೊಳ್ಳಲಾಯಿತು.

## ಶಿರಮನಹಳ್ಳಿ : ಇಂದು ದೇವಸ್ಥಾನದ ವಾರ್ಷಿಕೋತ್ಸವ



ಶಿರಮಗೊಂಡನಹಳ್ಳಿಯಲ್ಲಿರುವ ಶ್ರೀ ವೀರಹನುಮಾನ್ ದೇವಸ್ಥಾನದ 10 ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ವಿಶೇಷ ಅಭಿಷೇಕ, ಅಲಂಕಾರ, ನವಗ್ರಹ ಪೂಜೆ, ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಗೆ ಪ್ರಸಾದ ಏರ್ಪಡಿಸಲಾಗಿದೆ.


SSIMS SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 18 ಮಾರ್ಚ್ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327



WANTED
FULL TIME ACCOUNT ASSISTANT
With Experience in Tally Accounting
*Apply with Bio-Data immediately:*
SHANTALA
Chamrajpet, Davanagere
96861 95328, 96861 95323



॥ ಶ್ರೀ ಕೊಟ್ಟೂರು ಬಸವೇಶ್ವರ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ ವಾಸಿ
ಶ್ರೀ ಎಂ.ಕೆ. ಬಸವರಾಜ್ ಮತ್ತು ಸಹೋದರರು ಮಾಡುವ ವಿಜ್ಞಾಪನೆಗಳು.

ದಿನಾಂಕ 12.03.2021 ನೇ ಶುಕ್ರವಾರ ಸಂಜೆ 4.15 ಕ್ಕೆ ನಮ್ಮ ಪೂಜ್ಯ ತಂದೆಯವರಾದ

ಶರಣ ಶ್ರೀ ಎಂ. ಕನ್ನಪ್ಪ

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮ ಶಾಂತಿಗಾಗಿ

'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 16.03.2021ನೇ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ (# 2543/1)ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರ ಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀ ಎಂ.ಕೆ. ಬಸವರಾಜ, ಶ್ರೀಮತಿ ಸುಧಾ ಜಿ.ಜೆ. ಶ್ರೀ ಮಲ್ಲಿಕಾರ್ಜುನ ಎಂ.ಕೆ., ಶ್ರೀ ಕೊಟ್ರೇಶ್ ಎಂ.ಕೆ. ಅಳಿಯಂದಿರು, ಸೊಸೆಯಂದಿರು ಹಾಗೂ ಬಂಧು-ಮಿತ್ರರು.

ಎಂ.ಕೆ ಇಂಡಸ್ಟ್ರೀಸ್ | ಎಂ.ಕೆ. ಐಸ್ ಇಂಡಸ್ಟ್ರೀಸ್ | ಎಂ.ಕೆ. ಆಯಿಲ್ ಟ್ರೇಡರ್ಸ್

ವಿ.ಸೂ.: ಆಹ್ವಾನ ಪತ್ರಿಕೆ ತಲುಪದವರು ಇದನ್ನೆ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.



ಪ್ರಥಮ ವರ್ಷದ ಚಿರಸ್ಮರಣೆ



ದಿ॥ ಶ್ರೀಮತಿ ಸುಶೀಲಮ್ಮ ಎನ್.ಕೆ.
(ದಿ॥ ಎನ್.ಕೆ. ಚನ್ನವೀರಪ್ಪನವರ ಧರ್ಮಪತ್ನಿ)
ಜನನ : 04-05-1938 ಮರಣ : 16-03-2020

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ತುಂಬಿದೆ. ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪ.

ಎನ್.ಕೆ. ರಾಜೇಂದ್ರ ಮತ್ತು ಸಹೋದರರು
ಹಾಗೂ ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧುಗಳು
ಎನ್.ಕೆ. ಚನ್ನವೀರಪ್ಪ ಮತ್ತು ಮಕ್ಕಳು
ನೀರುಳ್ಳಿ ವ್ಯಾಪಾರಿಗಳು, (94486-66322)
ಸಂಗಮ್ ಏಜೆನ್ಸೀಸ್, ವೀಡಾಲ್ ಲೂಬ್ರಿಕೆಂಟ್ಸ್
ಎಪಿಎಂಸಿ ಯಾರ್ಡ್, ಪಿ.ಬಿ. ರಸ್ತೆ, ದಾವಣಗೆರೆ. (98452-50795)
ಶ್ರೀ ವೀರಭದ್ರೇಶ್ವರ ಟ್ರೇಡರ್ಸ್,
ಈರುಳ್ಳಿ ವ್ಯಾಪಾರಿಗಳು (98452 59395)



॥ ಶ್ರೀ ಭೈರಸಿದ್ದೇಶ್ವರ ಪ್ರಸನ್ನ ॥



ಕೈಲಾಸ ಸಮಾರಾಧನೆ ಮತ್ತು ಸರ್ವ ಶರಣ ಸಮ್ಮೇಳನದ ಆಮಂತ್ರಣ



ಶ್ರೀಮದ್ ವೃಷಭಪುರಿ ಶ್ರೀ ಶೈಲ ಸೂರ್ಯ ಸಿಂಹಾಸನಾಧೀಶ್ವರ 1108 ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು
*ಬೃಹನ್ಮಠ, ನಂದಿಗುಡಿ-ಅತ್ತಿಕಟ್ಟೆ ಇವರ ದಿವ್ಯಸಾನ್ನಿಧ್ಯದಲ್ಲಿ*

ದಾವಣಗೆರೆ ಜಿ॥, ಹರಿಹರ ತಾ॥ ಗೋವಿನಹಾಳು ಗ್ರಾಮದ ವಾಸಿ
ಶ್ರೀಮತಿ ಜಯಶೀಲಮ್ಮ ಚಂದ್ರಶೇಖರಪ್ಪ ದಡ್ಡಿ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.



ಜನನ : 25-05-1945 ಮರಣ : 26-03-2020

ದಿನಾಂಕ 26.03.2020 ನೇ ಗುರುವಾರ
ರಾತ್ರಿ 11.50 ಗಂಟೆಗೆ
ನನ್ನ ಪೂಜ್ಯ ಪತಿಯವರಾದ

ಶರಣ ಶ್ರೀ ದಡ್ಡಿ ಕೆ.ಪಿ. ಚಂದ್ರಶೇಖರಪ್ಪ

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

ಕೈಲಾಸ ಸಮಾರಾಧನೆ ಮತ್ತು ಸರ್ವ ಶರಣ ಸಮ್ಮೇಳನವನ್ನು

ದಿನಾಂಕ 17-03-2021ನೇ ಬುಧವಾರ
ಬೆಳಿಗ್ಗೆ 10.30 ಗಂಟೆಗೆ

ಮೃತರ ಸ್ವಗ್ರಾಮ ಗೋವಿನಹಾಳ್‌ನಲ್ಲಿರುವ ಶ್ರೀ ಸಿದ್ದರಾಮೇಶ್ವರ ರೈಸ್ ಇಂಡಸ್ಟ್ರೀಸ್‌ನಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದಿನಾಂಕ 16.03.2021ನೇ ಮಂಗಳವಾರ ರಾತ್ರಿ 'ಶಿವಭಜನೆ' ನಡೆಯಲಿದೆ.

ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : ಶ್ರೀಮತಿ ಜಯಶೀಲಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು, ದಡ್ಡಿ ವಂಶಸ್ಥರು ಹಾಗೂ ಗೋವಿನಹಾಳು ಗ್ರಾಮಸ್ಥರು ಮತ್ತು ದಿ॥ ಶ್ರೀ ಎಂ. ಹನುಮಗೌಡ್ರು ಹಾಗೂ ಮುದೇಗೌಡ್ರು ವಂಶಸ್ಥರು, ಹಿಂಡಸಘಟ್ಟ ಮತ್ತು ಬಂಧು-ಮಿತ್ರರು.

ಇಂದ : ಶ್ರೀಮತಿ, ಶ್ರೀ ಕೆ.ಪಿ. ಕುಬೇರಗೌಡ ಮತ್ತು ಮಕ್ಕಳು
ಗೋವಿನಹಾಳು, ಹರಿಹರ ತಾಲ್ಲೂಕು, ಫೋ. : 99002 56545, 90199 88738

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte